# ಅನಂತ ಜನಶಕ್ತಿ

ಸಂಪಾದಕ: ಎಸ್.ವೆಂಕಟೇಸುಲು
EDITOR : S VENKATESULU

ANANTHA JANA SAKTHI KANNADA DAILY ಕನ್ನಡ ದಿನಪತ್ರಿಕೆ

ಸಂಪುಟ : 01 ಸಂಚಿಕೆ : 51 ರಿ.ನಂ : ಕೆಎನ್‌ಎಎನ್ / 26 / ಎ5487 ಬಳ್ಳಾರಿ ಸೋಮವಾರ ದಿನಾಂಕ : 31-08-2026 ಪುಟ : 04 ಬೆಲೆ : 2-00

## ನಿಗಮ, ಮಂಡಳಿ ಅಧ್ಯಕ್ಷ ಗಾದಿಗೆ ಹಿರಿಯ ಶಾಸಕರ ಲಾಬಿ

ನವದೆಹಲಿ: ಪ್ರಮುಖ ನಿಗಮ, ಮಂಡಳಿಗಳ ಅಧ್ಯಕ್ಷ ಗಾದಿ ಪಡೆಯಲು ಕಾಂಗ್ರೆಸ್‌ನ ಹಿರಿಯ ಶಾಸಕರು ಲಾಬಿ ಆರಂಭಿಸಿದ್ದಾರೆ.

ಈ ಸಂಬಂಧ ಏಳು ಶಾಸಕರು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಇಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು.


'ನಮ್ಮ ಹಿರಿತನ ಹಾಗೂ ಯೋಗ್ಯತೆಯ ಆಧಾರದಲ್ಲಿ ನಿಗಮ, ಮಂಡಳಿಯಲ್ಲಿ ಅವಕಾಶ ನೀಡುವಂತೆ ಮನವಿ ಮಾಡಿ ದ್ದೇವೆ. ನಾವು ಪಕ್ಷಕ್ಕೆ ನಿಷ್ಠರಾದ ಶಾಸಕರು.ಸಚಿವ ಸಂಪುಟ ವಿಸ್ತರಣೆ ಮುಗಿದು ಹೋದ ಅಧ್ಯಾಯ. ಅದರ ಬಗ್ಗೆ ಮಾತನಾಡುವು ದರಲ್ಲಿ ಅರ್ಥವಿಲ್ಲ. ಹೀಗಾಗಿ, ಉತ್ತಮ ನಿಗಮ, ಮಂಡಳಿಗೆ ಪರಿಗಣಿಸುವಂತೆ ಕೋರಿದ್ದೇವೆ' ಎಂದು ಶಾಸಕ ಅಶೋಕ ಪಟ್ಟಣ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ಹಂಪನಗೌಡ ಬಾದರ್ಲಿ ಮಾತ ನಾಡಿ, 'ಮಂತ್ರಿಮಂಡಲ ವಿಸ್ತರಣೆಯಲ್ಲಾದ ಅನ್ಯಾಯ ಸರಿಪಡಿಸುವ ಬಗ್ಗೆ ಚರ್ಚೆ ಮಾಡಿದ್ದೇವೆ. ನಿಗಮ, ಮಂಡಳಿಗಳಲ್ಲಿ ಉತ್ತಮ ಅವಕಾಶ ನೀಡುವ ಬಗ್ಗೆ ಸಮಾಲೋಚನೆ ನಡೆಸಿದ್ದೇವೆ. ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಸಂಘಟನೆಯನ್ನು ಬಲಪಡಿಸುವ ಕುರಿತು ಚರ್ಚಿಸಿದ್ದೇವೆ' ಎಂದರು.

ಶಾಸಕರಾದ ಕೆ.ವೈ.ನಂಜೇಗೌಡ, ಡಿ.ಜಿ.ಶಾಂತನಗೌಡರ, ಬಸನಗೌಡ ದದ್ದಲ್, ಎನ್.ಎಚ್.ಕೋನರೆಡ್ಡಿ, ಜಿ.ಎಚ್.ಶ್ರೀನಿವಾಸ್ ಇದ್ದರು.



## ನೇಪಾಳ ಪ್ರವಾಹ: ಕನ್ನಡಿಗರ ಸುರಕ್ಷತೆ ನಮ್ಮ ಆದ್ಯತೆ : ಡಿಕೆಶಿ



ನವದೆಹಲಿ: ನೇಪಾಳದಲ್ಲಿ ಸಂಭವಿಸಿರುವ ಹಠಾತ್ ಪ್ರವಾಹ ಮತ್ತು ಭೂಕುಸಿತದ ಹಿನ್ನೆಲೆಯಲ್ಲಿ ಅಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣಾ ಕಾರ್ಯಾಚರಣೆಯ ಪ್ರಗತಿ ಕುರಿತು ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಿಂದ ಸಮಗ್ರ ಮಾಹಿತಿ ಪಡೆಯಲಾಯಿತು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ನೇಪಾಳದಲ್ಲಿ ಸಿಲುಕಿರುವ ಕನ್ನಡಿಗರ ಸುರಕ್ಷಿತ ವಾಪಸಾತಿಗೆ ನಮ್ಮ ಸರ್ಕಾರ ಸಕಲ ಕ್ರಮ ಕೈಗೊಂಡಿದೆ. ಈಗಾಗಲೇ 54 ಮಂದಿ ತಾಯ್ನಾಡಿಗೆ ಸುರಕ್ಷಿತವಾಗಿ ಮರಳಿದ್ದಾರೆ. ಸಂತ್ರಸ್ತರ ಕುಟುಂಬಸ್ಥರು ಯಾವುದೇ ಆತಂಕ ಪಡಬೇಕಿಲ್ಲ, ಸರ್ಕಾರ ನಿಮ್ಮೊಂದಿಗಿದೆ ಎಂದು ಡಿಕೆಶಿ ಹೇಳಿದ್ದಾರೆ. ನೇಪಾಳ ಮತ್ತು ಟಿಬೆಟ್ ಗಡಿಭಾಗದಲ್ಲಿ ಸಂಭವಿಸಿದ ಹಠಾತ್ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ 750ಕ್ಕೆ ಏರಿಕೆಯಾಗಿದೆ. 320 ಭಾರತೀಯರು ಸೇರಿದಂತೆ 3,000ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ.

## ನಾಗೇಂದ್ರ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ ಗೆಹಲೋತ್

ಬೆಂಗಳೂರು: ಯೋಜನೆ ಮತ್ತು ಸಾಂಖ್ಯಿಕ ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅಂಗೀಕರಿಸಿದ್ದಾರೆ. ಈ ಕುರಿತಂತೆ ಲೋಕಭವನವು ಪ್ರಕಟಣೆ ಹೊರಡಿಸಿದೆ.

ಆಗಸ್ಟ್ 29ರಂದು ನಾಗೇಂದ್ರ ಸಲ್ಲಿಸಿದ್ದ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲೋಕಭವನಕ್ಕೆ ಕಳುಹಿಸಿದ್ದು, ರಾಜೀನಾಮೆ ಅಂಗೀಕಾರಕ್ಕೆ ಶಿಫಾರಸು ಮಾಡಿದ್ದರು. ಅವರ ಶಿಫಾರಸಿನ ಅನ್ವಯ ರಾಜೀನಾಮೆ ಅಂಗೀಕರಿಸಿರುವುದಾಗಿ ರಾಜ್ಯಪಾಲರು ತಿಳಿಸಿದ್ದಾರೆ ಎಂದು




ಲೋಕಭವನ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಮಾಣವಚನ ಸ್ವೀಕರಿಸಿ ತಿಂಗಳು

2ನೇ ಪುಟಕ್ಕೆ...

## ನಶೆ ಮುಕ್ತ ಭಾರತಕ್ಕೆ ಪಣ : ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ



ನವದೆಹಲಿ: ಸಮಾಜದಲ್ಲಿ ಬದಲಾವಣೆ ತರುವ ಭಾರತೀಯರ ಪ್ರಯತ್ನಗಳನ್ನು ಶ್ಲಾಘಿಸುವ ತಮ್ಮ ಪರಂಪರೆಯನ್ನು ಮುಂದುವರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಭಾನುವಾರ ಮುಂಬೈ ಮೂಲದ ಕೃಷ್ಣ ಶೇಷಾದ್ರಿ, ನಾಗಾಲ್ಯಾಂಡ್‌ನ ಹೂ ಬೆಳೆಗಾರ್ತಿ ಹಾಗೂ ಒಡಿಶಾದ ಅರಣ್ಯ ಸಂರಕ್ಷಣೆಯಲ್ಲಿ ತೊಡಗಿರುವ ಮಹಿಳೆಯರ ಪ್ರಯತ್ನಗಳನ್ನು ಗುರುತಿಸಿ ಮೆಚ್ಚುಗೆ

2ನೇ ಪುಟಕ್ಕೆ...

## ಈಗ ಚುನಾವಣೆ ಎದುರಿಸಲು ಟನ್‌ಗಟ್ಟಲೆ ಹಣ ಬೇಕು: ಸಿದ್ದರಾಮಯ್ಯ

ತುಮಕೂರು: ಇನ್ಮುಂದೆ ನಾನು ಲೋಕಸಭೆಗೂ ನಿಲ್ಲಲ್ಲ, ವಿಧಾನಸಭೆಗೂ ನಿಲ್ಲಲ್ಲ. ಈಗ ಚುನಾವಣೆ ಎದುರಿಸಲು ಟನ್ ಗಟ್ಟಲೆ ಹಣ ಬೇಕು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿದರು.

ದಿವಂಗತ ಮಾಜಿ ಸಚಿವ ವೀರಣ್ಣನವರ ನುಡಿ ನಮನ ಕಾರ್ಯಕ್ರಮದಲ್ಲಿ ಭಾ-ಗಿಯಾಗಿ ಮಾತನಾಡಿದ ಸಿದ್ದರಾಮಯ್ಯ, ನನಗೆ ಉಗ್ರಪ್ಪನವರು ಕಾಲ್ ಮಾಡಿ ಹೇಳಿದ್ರು. ತುಮಕೂರಿನಲ್ಲಿ ಒಂದು ನುಡಿನಮನ ಕಾರ್ಯಕ್ರಮ ಮಾಡ್ತೀವಿ. ನೀವು ಬರಲೇಬೇಕು ಅಂದ್ರು. ನಾನು ವೀರಣ್ಣನವರು ಕಾಲವಾದ ದಿನ ಕೆ.ಆರ್. ಪೇಟೆಗೆ ಹೋಗಿದ್ದೆ. ಹಾಗಾಗಿ, ಅವತ್ತು ಬರುವುದಕ್ಕೆ ಆಗಲಿಲ್ಲ. ಆಸ್ಪತ್ರೆ ಸೇರಿದಾಗ ಉಗ್ರಪ್ಪ ಕಾಲ್ ಮಾಡಿದ್ರು. ಆಗ ಆಸ್ಪತ್ರೆಗೆ ಹೋದೆ. ಅವರನ್ನು ನೋಡಿ ಬಹಳ ವ್ಯಥೆ ಆಯಿತು. ಉಗ್ರಪ್ಪನವರನ್ನು ಕೇಳಿದೆ, ಹೇಗಿದ್ದಾರೆ ಅಂತಾ. ಸ್ವಲ್ಪ ಹುಷಾರಾಗಿದ್ದಾರೆ ಅಂದ್ರು. ಸ್ವಲ್ಪ ದಿನದಲ್ಲೇ



ಅವರ ಸಾವಾಯಿತು. ಅವರಿಗೆ 88 ವರ್ಷ ಆಗಿತ್ತು ಎಂದು ವಿಷಾದ ವ್ಯಕ್ತಪಡಿಸಿದರು.

ನನಗೆ ಈಗ 80 ವರ್ಷ, ನಾನು ಆರೋಗ್ಯವಾಗಿದ್ದೇನೆ. ಎಷ್ಟು ವರ್ಷ ಬದುಕಿರುತ್ತೇನೆ ಅಂತಾ ಗೊತ್ತಿಲ್ಲ. ನಾನು ಮುಂದಿನ ಚುನಾವಣೆಗೆ ನಿಲ್ಲಬಾರದು ಅಂತಾ ಅಂದುಕೊಂಡಿದ್ದೇನೆ. ಕಾರಣ ವಯಸ್ಸು

2ನೇ ಪುಟಕ್ಕೆ...

## ಚಿಕ್ಕಜಾಜೂರು - ಚಿತ್ರದುರ್ಗದಲ್ಲಿ ಆರ್‌ಒಬಿಗಳ ನಿರ್ಮಾಣಕ್ಕೆ ಕೇಂದ್ರ ಸಚಿವ ಸೋಮಣ್ಣ ಶಿಲಾನ್ಯಾಸ

ಚಿತ್ರದುರ್ಗ : ನೈರುತ್ಯ ರೈಲ್ವೆಯ ಮೈಸೂರು ವಿಭಾಗವು ರಸ್ತೆ ಮತ್ತು ರೈಲು ಸಂಪರ್ಕವನ್ನು ಮತ್ತಷ್ಟು ಸುಧಾರಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಚಿತ್ರದುರ್ಗ ಮತ್ತು ಚಿಕ್ಕಜಾಜೂರಿನಲ್ಲಿ ನಿರ್ಮಾಣವಾಗಲಿರುವ ಎರಡು ಪ್ರಮುಖ ರಸ್ತೆ ಮೇಲ್ಸೇತುವೆಗಳ ನಿರ್ಮಾಣಕ್ಕೆ ರೈಲ್ವೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರು ಇಂದು ಶಿಲಾನ್ಯಾಸ ನೆರವೇರಿಸಿದರು.

ಚಿಕ್ಕಜಾಜೂರು-ಚಿಕ್ಕಂದವಾಡಿ ನಿಲ್ದಾಣಗಳ ನಡುವಿನ ಎಲ್‌ಸಿ ಸಂಖ್ಯೆ 1ರ ಬದಲಿಗೆ ನಿರ್ಮಿಸಲಾಗುವ ಆರ್‌ಒಬಿಗೆ 25.15 ಕೋಟಿ ವೆಚ್ಚದಲ್ಲಿ ಅನುಮೋದನೆ ನೀಡಲಾಗಿದೆ. ಈ ಸೇತುವೆಯು ಚಿಕ್ಕಜಾಜೂರು ಮತ್ತು ದಾವಣಗೆರೆ ನಡುವಿನ ರಸ್ತೆ ಸಂಪರ್ಕವನ್ನು ಸುಧಾರಿಸಲಿದೆ.

ಅದೇ ರೀತಿ, ಚಿತ್ರದುರ್ಗ ಬಾಲೇನಹಳ್ಳಿ ನಿಲ್ದಾಣಗಳ ನಡುವಿನ ಎಲ್‌ಸಿ ಸಂಖ್ಯೆ 22ರ ಬದಲಿಗೆ ನಿರ್ಮಿಸಲಾಗುವ ಆರ್‌ಒಬಿಗೆ 32.51 ಕೋಟಿ ವೆಚ್ಚದಲ್ಲಿ ಅನುಮೋದನೆ ನೀಡಲಾಗಿದೆ.



ಇದರಿಂದ ಚಿತ್ರದುರ್ಗ ಮತ್ತು ದಾವಣಗೆರೆ ನಡುವಿನ ಸಂಪರ್ಕ ಮತ್ತಷ್ಟು ಬಲಪಡಲಿದೆ.

ಈ ಎರಡೂ ಆರ್‌ಒಬಿಗಳು ಪೂರ್ಣಗೊಂಡ ನಂತರ, ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳಲ್ಲಿ ವಾಹನಗಳು ಕಾಯಬೇಕಾದ ಸಮಯ ಕಡಿಮೆಯಾಗಲಿದೆ. ಇದರಿಂದ

2ನೇ ಪುಟಕ್ಕೆ...

## ಉಪ್ಪಾರ ಸಮುದಾಯದ ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಗೆ ಸಹಕಾರ: ಸಚಿವ ಬಸವಂತಪ್ಪ



ದಾವಣಗೆರೆ: ಉಪ್ಪಾರ ಸಮುದಾಯದ ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡುವುದಾಗಿ ಮುಜರಾಯಿ ಸಚಿವ ಕೆ.ಎಸ್. ಬಸವಂತಪ್ಪ ಭರವಸೆ ನೀಡಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಭಗೀರಥ ಉಪ್ಪಾರ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ನಿರಂತರ ಪ್ರೋತ್ಸಾಹ ನೀಡಬೇಕು. ಎಲ್ಲ ಸಮುದಾಯಗಳಲ್ಲಿಯೂ ಬಡವರಿದ್ದು, ಅವರಿಗೆ ನೆರವು ಹಾಗೂ ಪ್ರೋತ್ಸಾಹ ನೀಡಿ-ದರೆ ಸಮುದಾಯವು ಉನ್ನತ ಮಟ್ಟದಲ್ಲಿ ಬೆಳೆಯಲು ಸಾಧ್ಯವಾಗುತ್ತದೆ. ಶ್ರಮಜೀವಿ ಹಾಗೂ ಕಾಯಕ ಸಮುದಾಯದ ಮಕ್ಕಳು ಕಷ್ಟಪಟ್ಟು ಶಿಕ್ಷಣ ಪಡೆ-ಯುತ್ತಿದ್ದಾರೆ. ಪಾಲಕರು ಸಾಕಷ್ಟು ಶ್ರಮವಹಿಸಿ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದು, ಅವರ ಕನಸು ಭಗ್ನವಾಗದಂತೆ ವಿದ್ಯಾರ್ಥಿಗಳು ಉತ್ತಮವಾಗಿ

2ನೇ ಪುಟಕ್ಕೆ...

### ಸಿದ್ದರಾಮಯ್ಯ 50 ಎಕರೆ ಜಾಗ ಮಂಜೂರು...

ಹಿಂದುಳಿದ, ಶೋಷಿತ ಸಮುದಾಯಗಳ ಹಾಗೂ ದಲಿತ ಮಠಾಧೀಶರ ಒಕ್ಕೂಟ ರಚಿಸಿಕೊಂಡಿದ್ದು, ಬೆಂಗಳೂರಿನಲ್ಲಿ ಎಲ್ಲ ಸಮುದಾಯಗಳಿಗೂ ತಲಾ ಒಂದು ಜಾಗ ನೀಡುವಂತೆ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದಕ್ಕೆ ಸ್ಪಂದಿಸಿದ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚನೆ ನೀಡಿ ಒಂದೇ ಕಡೆ 50 ಎಕರೆ ಜಾಗ ಮಂಜೂರು ಮಾಡಿಸಿದರು. ಈ ಜಾಗವನ್ನು 22 ಮಠಗಳಿಗೆ ಹಂಚಿಕೆ ಮಾಡಲಾಗಿದ್ದು, ಅದರಲ್ಲಿ ಉಪ್ಪಾರ ಸಮುದಾಯಕ್ಕೂ ನಾಲ್ಕು ಎಕರೆ ಜಾಗ ದೊರೆತಿದೆ. ಮುಂದಿನ ದಿನಗಳಲ್ಲಿ ಈ ಜಾಗದಲ್ಲಿ ಶಿಕ್ಷಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ತಿಳಿಸಿದರು.

## ನಾಗೇಂದ್ರ ಸಚಿವ ಸ್ಥಾನ ನಾವು ಕಸಿದುಕೊಂಡಿಲ್ಲ ಶಾಸಕ ಗಾಲಿ ಜನಾರ್ದನ ರೆಡ್ಡಿ



ಬಳ್ಳಾರಿ : ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಗ್ರಾಮೀಣ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಸಚಿವ ಸ್ಥಾನವನ್ನು ನಾನಾಗಲಿ ಶ್ರೀರಾಮುಲಾಗಲಿ ಅಥವಾ ಬಿಜೆಪಿ ಪಕ್ಷವಾಗಲಿ ಕಸಿದುಕೊಂಡಿಲ್ಲ ವಾಲ್ಮೀಕಿ ಹಗರಣದಲ್ಲಿ ಮಾಡಬಾರದ ತಪ್ಪನ್ನು ಮಾಡಿ ಸಚಿವ ಸ್ಥಾನ ಕಳೆದುಕೊಂಡಿದ್ದಾನೆ ಹೊರತು ಅದಕ್ಕೆ ನಾವು ಹೊಣೆಯಲ್ಲ ಎಂದು ಜನಾರ್ದನ ರೆಡ್ಡಿ ಕುಟಿಕಿದರು. ಈ ಕುರಿತು ಅವರು ಇಂದು ನಗರದ ಸಿರುಗುಪ್ಪ ರಸ್ತೆಯ ತಮ್ಮ ಗೃಹ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಜನಾರ್ದನ ರೆಡ್ಡಿ, ನಾಗೇಂದ್ರ ಅವರ ಸುದ್ದಿಗೋಷ್ಠಿಯನ್ನು ನೋಡಿದ್ದೇನೆ.

2ನೇ ಪುಟಕ್ಕೆ...

ಒಂದನೇ ಪುಟದಿಂದ..

## ನಶೆ ಮುಕ್ತ ಭಾರತಕ್ಕೆ ಪಣ : ಮನ್ ಕಿ ಬಾತ್‌ನಲ್ಲಿ
# ಪ್ರಧಾನಿ ನರೇಂದ್ರ ಮೋದಿ ಕರೆ

ವ್ಯಕ್ತಪಡಿಸಿದರು. ತಮ್ಮ 137ನೇ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ ಮತ್ತು 'ವೋಕಲ್ ಫಾರ್ ಲೋಕಲ್' ಪ್ರಮುಖ ವಿಷಯಗಳಾಗಿ ಹೊರಹೊಮ್ಮಿದವು.

ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮದ 137ನೇ ಸಂಚಿಕೆಯಲ್ಲಿ ಪ್ರಧಾನಿ ಮೋದಿ ಅವರು 'ಭಾರತ್‌ರಾಜ್ಯ' ವೆಬ್‌ಸೈಟ್ ನಿರ್ಮಿಸಿರುವ ಕೃಷ್ಣ ಶೇಷಾದ್ರಿ ಅವರನ್ನು ಶ್ಲಾಘಿಸಿದರು. ಈ ವೆಬ್‌ಸೈಟ್ ಮೂಲಕ ಬಳಕೆದಾರರು ಯಾವುದೇ ಒಂದು ವರ್ಷವನ್ನು ಆಯ್ಕೆ ಮಾಡಿಕೊಂಡು, ಆ ಸಂದರ್ಭದಲ್ಲಿ ಭಾರತದ ಯಾವ ಭಾಗವನ್ನು ಯಾರು ಆಳುತ್ತಿದ್ದರು ಎಂಬುದನ್ನು ತಿಳಿದುಕೊಳ್ಳಬಹುದು.

ಆಷಾಢ ಏಕಾದಶಿಯ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಶೇಷಾದ್ರಿ ಅವರ ಈ ಪ್ರಯತ್ನ ತಮ್ಮ ಗಮನಕ್ಕೆ ಬಂದಿತ್ತು. ಅವರ ಕಲ್ಪನೆ ತಮಗೆ ಆಸಕ್ತಿದಾಯಕವೆನಿಸಿತು ಎಂದು ಪ್ರಧಾನಿ ಹೇಳಿದರು. ಕೃಷ್ಣ ಶೇಷಾದ್ರಿ ಅವರು 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ದೂರವಾಣಿ ಮೂಲಕ ಪ್ರಧಾನಿಯೊಂದಿಗೆ ಸಂವಾದ ನಡೆಸಿದರು. ತಂತ್ರಜ್ಞಾನ ಮತ್ತು ಇತಿಹಾಸದಲ್ಲಿನ ತಮ್ಮ ಆಸಕ್ತಿ ಹಾಗೂ ಈ ಎರಡನ್ನೂ 'ಭಾರತ್‌ರಾಜ್ಯ' ಯೋಜನೆಯ ಮೂಲಕ ಹೇಗೆ ಒಟ್ಟುಗೂಡಿಸಿದ್ದಾರೆ ಎಂಬುದನ್ನು ಅವರು ಹಂಚಿಕೊಂಡರು. ದೇಶದ ಆರ್ಥಿಕತೆಯಲ್ಲಿ ಮಹಿಳೆಯರ ಹೆಚ್ಚುತ್ತಿರುವ ಪಾತ್ರವನ್ನು ಒತ್ತಿ ಹೇಳಿದ ಪ್ರಧಾನಿ ಮೋದಿ, 'ಪಿಎಂ ಸ್ವನಿಧಿ ಯೋಜನೆ' ಲಕ್ಷಾಂತರ ಮಹಿಳಾ ಉದ್ಯಮಿಗಳಿಗೆ ಹೊಸ ಶಕ್ತಿ ನೀಡುತ್ತಿದೆ ಎಂದು ಹೇಳಿದರು. ಮಹಿಳಾ ಸಬಲೀಕರಣದ ಈ ಅಂಶದ ಕುರಿತು ಅಗತ್ಯ ಪ್ರಮಾಣದಲ್ಲಿ ಚರ್ಚೆಯಾಗುತ್ತಿಲ್ಲ ಎಂದರು. ಪಿಎಂ ಸ್ವನಿಧಿ ಯೋಜನೆಯ ಫಲಾನುಭವಿಗಳಲ್ಲಿ ಶೇ.46ರಷ್ಟು ಮಂದಿ ಮಹಿಳೆಯರು ಎಂದು ಅವರು ತಿಳಿಸಿದರು.

ಪ್ರತಿದಿನ ಬೆಳಗ್ಗೆಯಿಂದ ಸಂಜೆಯವರೆಗೆ ನಮ್ಮ ನಗರಗಳು ಮತ್ತು ಪಟ್ಟಣಗಳ ಬೀದಿಗಳಲ್ಲಿ ಲಕ್ಷಾಂತರ ಮಹಿಳೆಯರು ತಮ್ಮ ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಾರೆ. ಕೆಲವರು ತರಕಾರಿ ಮಾರುತ್ತಾರೆ, ಕೆಲವರು ಹಣ್ಣುಗಳನ್ನು ಮಾರುತ್ತಾರೆ, ಮತ್ತೆ ಕೆಲವರು ಚಹಾ ಅಂಗಡಿಗಳನ್ನು ನಡೆಸುತ್ತಾರೆ. ಇನ್ನೂ ಕೆಲವರು ಹೂವು, ದೀಪಗಳು ಮತ್ತು ಪೂಜಾ ಸಾಮಗ್ರಿಗಳನ್ನು ಮಾರಾಟ ಮಾಡುತ್ತಾರೆ.

ಅನೇಕ ಬಾರಿ ಸ್ವಲ್ಪ ಪ್ರಮಾಣದ ಬಂಡವಾಳದ ಕೊರತೆಯಿಂದ ಅವರ ವ್ಯವಹಾರಗಳು ಬೆಳೆಯಲು ಸಾಧ್ಯವಾಗುವುದಿಲ್ಲ. ಆದರೆ ಈಗ ಇಂತಹ ಲಕ್ಷಾಂತರ ತಾಯಂದಿರು ಮತ್ತು ಸಹೋದರಿಯರು 'ಪಿಎಂ ಸ್ವನಿಧಿ ಯೋಜನೆಯಿಂದ ಹೊಸ ಶಕ್ತಿ ಪಡೆಯುತ್ತಿದ್ದಾರೆ. ಮಹಿಳಾ ಸಬಲೀಕರಣದ ಈ ಅಂಶದ ಕುರಿತು ಎಷ್ಟು ಚರ್ಚೆಯಾಗಬೇಕೋ ಅಷ್ಟು ಚರ್ಚೆಯಾಗುತ್ತಿಲ್ಲ ಎಂದು ಪ್ರಧಾನಿ ಮೋದಿ ಹೇಳಿದರು.

ಘಾಜಿಯಾಬಾದ್‌ನ ಬಬಿತಾ ಶರ್ಮಾ ಅವರು ರಸ್ತೆಬದಿಯ ಅಂಗಡಿಯಿಂದ ಶಾಶ್ವತ ಅಂಗಡಿಗೆ ಸ್ಥಳಾಂತರಗೊಂಡಿರುವುದನ್ನು ಹಾಗೂ ಬೆಂಗಳೂರಿನ ಟಿ.ಎಸ್. ನಿಂಗಮ್ಮ ಅವರು ತಮ್ಮ ಪತಿಯೊಂದಿಗೆ ಸಣ್ಣ ಹೋಟೆಲ್ ನಡೆಸುತ್ತಿರುವುದನ್ನು ಪ್ರಧಾನಿ ಉದಾಹರಣೆಯಾಗಿ ನೀಡಿದರು.

ಒಡಿಶಾದಲ್ಲಿ ಅರಣ್ಯ ಸಂರಕ್ಷಣೆಗೆ ಮಹಿಳೆಯರ ಕೊಡುಗೆ

ಒಡಿಶಾದ ದೇಬ್ರಿಗಢ್‌ನ 'ಧೋಡ್ರ್ರಕುಸುಮ್' ಗ್ರಾಮದ ಮೈಥಿಲಿ ಭುಯೆ ಅವರು ಅರಣ್ಯ ಸಂರಕ್ಷಣೆ ಮತ್ತು ಪರಿಸರ ಪ್ರವಾಸೋದ್ಯಮಕ್ಕೆ ನೀಡುತ್ತಿರುವ ಕೊಡುಗೆಯನ್ನು ಪ್ರಧಾನಿ ಮೋದಿ ಶ್ಲಾಘಿಸಿದರು. ಕೆಲವು ವರ್ಷಗಳ ಹಿಂದಿನವರೆಗೆ ಮೈಥಿಲಿ ಭುಯೆ ಅವರು ಉರುವಲು ಸಂಗ್ರಹಿಸಲು ಅಥವಾ ಮಹುವಾ ಮತ್ತು ಕೆಂಡು ಎಲೆಗಳನ್ನು ಕೀಳಲು ಅರಣ್ಯಕ್ಕೆ ಹೋಗುತ್ತಿದ್ದರು. ಆದರೆ ನಂತರ ಅವರು ದೇಬ್ರಿಗಢ್ ಪರಿಸರ ಪ್ರವಾಸೋದ್ಯಮದೊಂದಿಗೆ ಕೈಜೋಡಿಸಿದರು. ಅಲ್ಲಿಂದ ಅರಣ್ಯದೊಂದಿಗಿನ ಅವರ ಸಂಬಂಧಕ್ಕೆ ಹೊಸ ದಿಕ್ಕು ದೊರೆಯಿತು. ಈಗ ಅರಣ್ಯವೇ ಅವರ ಜೀವನೋಪಾಯದ ಸಾಧನವಾಗಿದೆ ಎಂದು ಪ್ರಧಾನಿ ಹೇಳಿದರು.


## ಬಳ್ಳಾರಿಯಲ್ಲಿ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿಕೆ

ಬಳ್ಳಾರಿ: ನಗರದ ಪ್ರಮುಖ ರಸ್ತೆ ಹಾಗೂ ಬಡಾವಣೆಗಳಲ್ಲಿ ಫುಟ್‌ಪಾತ್‌ಗಳನ್ನು ಅತಿಕ್ರಮಿಸಿ ನಡೆಸಲಾಗುತ್ತಿದ್ದ ಅನಧಿಕೃತ ವ್ಯಾಪಾರ ಹಾಗೂ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ಶನಿವಾರವೂ ನಡೆಸಿದರು.
ಬೆಂಗಳೂರು ರಸ್ತೆ, ಕಾರ್‌ಸ್ಟ್ರೀಟ್, ಕೌಲ್‌ಬಜಾರ್ ಸೇರಿದಂತೆ ವಿವಿಧೆಡೆ ಫುಟ್‌ಪಾತ್ ಆಕ್ರಮಿಸಿ ಹಾಕಲಾಗಿದ್ದ ತಾತ್ಕಾಲಿಕ ಷೆಡ್‌ಗಳು, ಡಬ್ಬಾ ಅಂಗಡಿಗಳನ್ನು ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದರು.
ಸಾರ್ವಜನಿಕರು ಹಾಗೂ ವಾಹನ ಸವಾರರ ಸುಗಮ ಸಂಚಾರಕ್ಕೆ ಅಡ್ಡಿಯುಂಟುಮಾಡುತ್ತಿರುವ ಇಂತಹ ಅನಧಿಕೃತ ಒತ್ತುವರಿಗಳ ವಿರುದ್ಧದ ಕಾರ್ಯಾಚರಣೆಯು ಮುಂದಿನ ದಿನಗಳಲ್ಲಿಯೂ ನಿರಂತರವಾಗಿ ಮುಂದುವರೆಯಲಿದೆ ಎಂದು ಪಾಲಿಕೆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

## ರೆಡ್ಡಿಗೆ ಸ್ಟೇ ಸಿಕ್ಕಿದೆಯೇ ಹೊರತು ಖುಲಾಸೆಯಾಗಿಲ್ಲ
# ಬಿಜೆಪಿ ವಿರುದ್ಧ ಟಪಾಲ್ ಗಣೇಶ್ ಆಕ್ರೋಶ

ಬಳ್ಳಾರಿ: ಮಾಜಿ ಸಚಿವ, ಶಾಸಕ ಗಾಲಿ ಜನಾರ್ದನ ರೆಡ್ಡಿ ಹಾಗೂ ಅವರನ್ನು ಬೆಂಬಲಿಸುತ್ತಿರುವ ಬಿಜೆಪಿ ನಾಯಕರ ವಿರುದ್ಧ ಗಣಿ ಹೋರಾಟಗಾರ ಟಪಾಲ್ ಗಣೇಶ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ರೆಡ್ಡಿಯವರು ಸತ್ಯಹರಿಶ್ಚಂದ್ರನ ಮಗನಂತೆ ಮಾತನಾಡುತ್ತಿದ್ದು, ಬೇರೆಯವರ ರಾಜಕೀಯ ನೈತಿಕತೆಯನ್ನು ಪ್ರಶ್ನಿಸುವ ಯಾವುದೇ ಹಕ್ಕು ಅವರಿಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ 7 ವರ್ಷ ಶಿಕ್ಷೆಗೆ ಗುರಿಯಾಗಿದ್ದವರು ಇಂದು ನೈತಿಕತೆಯ ಪಾಠ ಮಾಡುತ್ತಿದ್ದಾರೆ. ಸಿಬಿಐ ವಿಶೇಷ ಕೋರ್ಟ್ ನೀಡಿರುವ ತೀರ್ಪನ್ನು ಬಿಜೆಪಿ ನಾಯಕರು ಮೊದಲು ಪೂರ್ಣವಾಗಿ ಓದಿಕೊಳ್ಳಲಿ. ಆಮೇಲೆ ಮಾತನಾಡಲಿ ಎಂದು ಸವಾಲು ಹಾಕಿದರು.

ಜನಾರ್ದನ ರೆಡ್ಡಿಗೆ ಕೋರ್ಟ್‌ನಿಂದ ಶಿಕ್ಷೆಗೆ ಮಧ್ಯಂತರ ತಡೆ ಸಿಕ್ಕಿದೆಯೇ ಹೊರತು, ಅವರು ಪ್ರಕರಣದಿಂದ ಸಂಪೂರ್ಣ ಖುಲಾಸೆಯಾಗಿಲ್ಲ. ತಪ್ಪು ಮಾಡಿಲ್ಲ ಎಂದಾದರೆ ಕೋರ್ಟ್ ಮುಂದೆ ಹೋಗಿ 'ಶಿಕ್ಷೆ ಕಡಿಮೆ ಮಾಡಿ' ಎಂದು ಜನಾರ್ದನ ರೆಡ್ಡಿ ಬೇಡಿಕೊಂಡಿದ್ದು ಯಾಕೆ ಎಂದು ಟಪಾಲ್ ಗಣೇಶ್



ಪ್ರಶ್ನಿಸಿದರು. ಇದೇ ವೇಳೆ ಬಿಜೆಪಿಯ ನಿಲುವನ್ನು ತರಾಟೆಗೆ ತೆಗೆದುಕೊಂಡ ಅವರು, ಗಂಭೀರ ಅಕ್ರಮ ಗಣಿಗಾರಿಕೆ ಆರೋಪ ಎದುರಿಸುತ್ತಿರುವ ವ್ಯಕ್ತಿಯನ್ನು ಬಿಜೆಪಿ ಬೆಂಬಲಿಸುತ್ತಿರುವುದು ನಾಚಿಕೆಗೇಡು. ಬಿಜೆಪಿಗೆ ಮಾನ-ಮರ್ಯಾದೆ ಇದೆಯಾ? ಜನಾರ್ದನ ರೆಡ್ಡಿಯನ್ನು ಸಮರ್ಥಿಸಿಕೊಳ್ಳುವ ಬಿಜೆಪಿ ನಾಯಕರು ಮೊದಲು ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ಓದಿ, ಜನರಿಗೆ ಸರಿಯಾದ ಉತ್ತರ ನೀಡಲಿ ಎಂದು ಗುಡುಗಿದ್ದಾರೆ.

ಒಂದನೇ ಪುಟದಿಂದ..

# ಚಿಕ್ಕಜಾಜೂರು – ಚಿತ್ರದುರ್ಗದಲ್ಲಿ ಆರ್‌ಒಬಿಗಳ ನಿರ್ಮಾಣಕ್ಕೆ ಕೇಂದ್ರ ಸಚಿವ ಸೋಮಣ್ಣ ಶಿಲಾನ್ಯಾಸ

ರಸ್ತೆ ಸುರಕ್ಷತೆ ಹೆಚ್ಚುವುದರ ಜೊತೆಗೆ ವಾಹನಗಳ ಸಂಚಾರವೂ ಯಾವುದೇ ಅಡಚಣೆಯಿಲ್ಲದೆ ಸುಗಮವಾಗಿ ನಡೆಯಲಿದೆ. ಚಿತ್ರದುರ್ಗ ರೈಲು ನಿಲ್ದಾಣದ ಪುನರಾಭಿವೃದ್ಧಿ ಚಿತ್ರದುರ್ಗ ರೈಲು ನಿಲ್ದಾಣವನ್ನು ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿ 11.78 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಪುನರಾಭಿವೃದ್ಧಿ ಮಾಡಲಾಗುತ್ತಿದೆ. ಯೋಜನೆಯಡಿ ಹೊಸ ನಿಲ್ದಾಣ ಕಟ್ಟಡ, ವಾಹನ ನಿಲುಗಡೆ ವ್ಯವಸ್ಥೆ ಮತ್ತು ಉತ್ತಮ ಬೆಳಕಿನ ವ್ಯವಸ್ಥೆ, ಎಲ್‌ಇಡಿ ಫಲಕಗಳು, ಕಟ್ಟಡದ ಮುಂಭಾಗಕ್ಕೆ ವಿಶೇಷ ಬೆಳಕಿನ ವ್ಯವಸ್ಥೆ, ಪ್ರಯಾಣಿಕರ ಮಾಹಿತಿ ವ್ಯವಸ್ಥೆ ಸೇರಿದಂತೆ ವಿವಿಧ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ನಿಲ್ದಾಣದ ಪ್ರಮುಖ ಕಟ್ಟಡ ಕಾಮಗಾರಿಗಳು ಪೂರ್ಣಗೊಂಡಿದ್ದು, ನೆಲಹಾಸು, ಪ್ಲಂಬಿಂಗ್, ಬಣ್ಣ ಬಳಿಯುವುದು, ವಿದ್ಯುತ್ ಕಾಮಗಾರಿ, ಕಟ್ಟಡದ ಹೊರಾಂಗಣ ವಿನ್ಯಾಸ, ಸಂಪರ್ಕ ರಸ್ತೆ, ವಾಹನ ನಿಲುಗಡೆ ಶೆಲ್ಟರ್ ಹಾಗೂ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಕಾಮಗಾರಿಗಳನ್ನು ರೈಲು ನಿಲ್ದಾಣದ ಸಾಮಾನ್ಯ ಕಾರ್ಯಾಚರಣೆಗೆ ಯಾವುದೇ ತೊಂದರೆಯಾಗದಂತೆ ಕೈಗೊಳ್ಳಲಾಗುತ್ತಿದೆ.

ರೈಲ್ವೆ ಅಭಿವೃದ್ಧಿಗೆ ಜನಪ್ರತಿನಿಧಿಗಳ ಒತ್ತು

ಕಾರ್ಯಕ್ರಮದಲ್ಲಿ ಮಾತನಾಡಿದ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಶ್ರೀ ಗೋವಿಂದ ಎಂ. ಕರಜೋಳ ಮತ್ತು ಮಾನ್ಯ ಶಾಸಕರಾದ ಶ್ರೀ ಎಂ. ಚಂದ್ರಪ್ಪ ಅವರು ಸಾರ್ವಜನಿಕರ ಅನುಕೂಲಕ್ಕಾಗಿ ಹೆಚ್ಚಿನ ರೈಲುಗಳಿಗೆ ನಿಲುಗಡೆ ನೀಡುವಂತೆ ಮನವಿ ಮಾಡಿದರು. ವಿಶೇಷವಾಗಿ ಹೊಳಲ್ಕೆರೆ ನಿಲ್ದಾಣದಲ್ಲಿ ವಿಶ್ವಮಾನವ ಎಕ್ಸ್‌ಪ್ರೆಸ್ ಮತ್ತು ಚಾಲುಕ್ಯ ಎಕ್ಸ್‌ಪ್ರೆಸ್ ಹಾಗೂ ಚಿಕ್ಕಜಾಜೂರು ನಿಲ್ದಾಣದಲ್ಲಿ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್‌ಗೆ ನಿಲುಗಡೆ ನೀಡುವಂತೆ ಅವರು ಕೋರಿದರು. ಚಿತ್ರದುರ್ಗದ ಮಾನ್ಯ ಶಾಸಕರಾದ ಶ್ರೀ ಕೆ.ಸಿ. ವೀರೇಂದ್ರ ಪಪ್ಪಿ ಅವರು ಈ ಭಾಗದಲ್ಲಿ ಕೈಗೊಳ್ಳಲಾಗುತ್ತಿರುವ ಎಲ್ಲಾ ರೈಲ್ವೆ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಮತ್ತು ದೀರ್ಘಕಾಲ ಬಾಳಿಕೆ ಬರುವ ರೀತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಮಾನ್ಯ ರೈಲ್ವೆ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ ಅವರು, ಅಗತ್ಯವಿರುವ ಕಡೆಗಳಲ್ಲಿ ಲೆವೆಲ್ ಕ್ರಾಸಿಂಗ್‌ಗಳನ್ನು ಹಂತ ಹಂತವಾಗಿ ರಸ್ತೆ ಮೇಲ್ಸೇತುವೆಗಳು ಮತ್ತು ರಸ್ತೆ ಕೆಳಸೇತುವೆಗಳ ಮೂಲಕ ಬದಲಾಯಿಸಿ ಸುರಕ್ಷತೆ ಮತ್ತು ಸಂಪರ್ಕವನ್ನು ಸುಧಾರಿಸಲಾಗುವುದು ಎಂದು ಭರವಸೆ ನೀಡಿದರು.

# ಉಪ್ಪಾರ ಸಮುದಾಯದ ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಗೆ ಸಹಕಾರ: ಸಚಿವ ಬಸವಂತಪ್ಪ

ಓದಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಇಟ್ಟುಕೊಂಡು ಶಿಕ್ಷಣ ಪಡೆಯಬೇಕು. ಅಂಕಗಳ ಜತೆಗೆ ಮಾನವೀಯ ಗುಣ ಹಾಗೂ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಹೆಚ್ಚಿನ ಅಂಕ ಗಳಿಸುವುದರೊಂದಿಗೆ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತಬೇಕು. ಮಾನವೀಯ ಮೌಲ್ಯ ಹೊಂದಿರುವ ವ್ಯಕ್ತಿ ಮಾತ್ರ ಸಮಾಜದ ನಿಜವಾದ ಆಸ್ತಿಯಾಗಬಲ್ಲರು ಎಂದರು.

ಹಿಂದುಳಿದ ಸಮುದಾಯಗಳ ಏಳಿಗೆಗೆ ಕೈಜೋಡಿಸುವುದರ ಜತೆಗೆ ಅವರ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತೇನೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರೊಂದಿಗೆ ಚರ್ಚಿಸಿ ಉಪ್ಪಾರ ಸಮುದಾಯಕ್ಕೆ ಸಿಎ ನಿವೇಶನ ಕೊಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ಬಸವಂತಪ್ಪ ಭರವಸೆ ನೀಡಿದರು.

ಭಗೀರಥ ಗುರುಪೀಠದ ಜಗದ್ಗುರು ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಆಶೀರ್ವಚನ ನೀಡಿ, ಹಿಂದಿನ ಕಾಲದಲ್ಲಿ ಶಕ್ತಿ ಹಾಗೂ ಬಲದಿಂದ ಅಧಿಕಾರ ಪಡೆಯುವ ಪರಿಸ್ಥಿತಿ ಇತ್ತು. ಆದರೆ ಇಂದು ಜ್ಞಾನದ ಯುಗವಾಗಿದ್ದು, ಜ್ಞಾನವನ್ನು ಹೊಂದಿರುವವರು ಅಧಿಕಾರ ಹಾಗೂ ಶಕ್ತಿಯನ್ನು ಪಡೆದುಕೊಳ್ಳಲು ಸಾಧ್ಯವಿದೆ ಎಂದು ಹೇಳಿದರು.

ದೇಶಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ನೀಡಿದ ಸಂವಿಧಾನದ ಶಕ್ತಿಯಿಂದ ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಕೆ.ಎಸ್. ಬಸವಂತಪ್ಪ ಸಚಿವರಾಗಿ ಸೇರ್ಪಡೆಯಾಗಿದ್ದಾರೆ. ಇದರಿಂದ ಪ್ರಜಾಪ್ರಭುತ್ವದ ಶಕ್ತಿ ಎಷ್ಟಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ಎಂ.ಸಿ. ರಮೇಶ್, ರಾಜ್ಯ ಉಪಾಧ್ಯಕ್ಷ ಹಾಗೂ ಕಾನೂನು ಸಲಹೆಗಾರ ವಕೀಲ ಯು. ಹನುಮಂತಪ್ಪ, ಜಿಲ್ಲಾ ಭಗೀರಥ ಉಪ್ಪಾರ ಸಂಘದ ಗೌರವಾಧ್ಯಕ್ಷ ಹೆಚ್. ತಿಪ್ಪಣ್ಣ, ಶಸ್ತ್ರಚಿಕಿತ್ಸಕ ಡಾ. ಉಮೇಶ್ ಬಾಬು, ರಾಜ್ಯ ಉಪ್ಪಾರ ಸಂಘದ ಅಧ್ಯಕ್ಷ ಎನ್.ಎಸ್. ಚಂದ್ರಪ್ಪ, ದೂಡಾ ಮಾಜಿ ಅಧ್ಯಕ್ಷ ಪ್ರಕಾಶ್ ಕೆ.ವೈ., ಮಾಜಿ ಉಪ ಮೇಯರ್‌ಗಳಾದ ಮಂಜಮ್ಮ, ಬಿ.ಎಸ್. ಜಯಣ್ಣ, ಜಿಲ್ಲಾ ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಹೆಚ್.ಪಿ. ಹನುಮಂತಪ್ಪ, ಜಿಲ್ಲಾ ಉಪ್ಪಾರ ಯುವಕರ ಸಂಘದ ಅಧ್ಯಕ್ಷ ಎನ್.ವಿ.ಎ. ಲೋಕೇಶ್, ಗ್ರಾಮಾಂತರ ಪೊಲೀಸ್ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಅಣ್ಣಯ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಹನಾ ಮಂಜುನಾಥ ಪ್ರಾರ್ಥಿಸಿದರು. ಕಾರ್ಯಾಧ್ಯಕ್ಷ ಹೆಚ್.ಎಸ್. ಹಾಲೇಶ್ ಸ್ವಾಗತಿಸಿದರು. ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

## ನಾಗೇಂದ್ರ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ ಗೆಹಲೋತ್

ತುಂಬುವ ಮೊದಲೇ ಸಚಿವ ಸ್ಥಾನಕ್ಕೆ ಬಿ. ನಾಗೇಂದ್ರ ಅವರು ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಮೂರು ತಿಂಗಳು ದಾಟುವಷ್ಟರಷ್ಟೇ ಅವರ ಓರ್ವ ಸಹೋದ್ಯೋಗಿಯ ಪದಚ್ಯುತಿ ಆದಂತಾಗಿದೆ. ಸಿದ್ದರಾಮಯ್ಯ ನೇತೃತ್ವದ ಮೂರು ವರ್ಷಗಳ ಅವಧಿಯಲ್ಲಿ, ಮೊದಲಿಗೆ ಬಿ. ನಾಗೇಂದ್ರ ಹಾಗೂ ಬಳಿಕ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಡೆ ಟೀಕಿಸಿದ್ದಕ್ಕೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಲಾಗಿತ್ತು. ಶಿವಕುಮಾರ್ ಅವರ ಸಂಪುಟದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿ ನಾಗೇಂದ್ರ ಅವರು ಇದೇ ಆ. 3ರಂದು ಪ್ರಮಾಣವಚನ ಸ್ವೀಕರಿಸಿದ್ದರು. 2023ರ ವಿಧಾನಸಭಾ ಚುನಾವಣೆಯ ನಂತರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದರು. ಆಗ ನಡೆದಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮದಲ್ಲಿ ಭಾಗಿಯಾದ ಆರೋಪ ಅವರ ಮೇಲಿತ್ತು. ಅಂದು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಶಿವಕುಮಾರ್ ನೇತೃತ್ವದ ಹೊಸ ಸರ್ಕಾರ ಜೂನ್ 3ರಂದು ಅಸ್ತಿತ್ವಕ್ಕೆ ಬಂದ ಎರಡು ತಿಂಗಳ ನಂತರ ನಡೆದ ಸಂಪುಟ ವಿಸ್ತರಣೆಯಲ್ಲಿ ಮತ್ತೆ ಅವರಿಗೆ ಸ್ಥಾನ ನೀಡಲಾಗಿತ್ತು. ಈಚೆಗೆ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಜೆಡಿಎಸ್ ಸದನದ ಒಳಗೆ ನಿರಂತರ ಪ್ರತಿಭಟನೆ ನಡೆಸಿದ್ದವು. ಇಡೀ ಅಧಿವೇಶನವೇ ವ್ಯರ್ಥವಾಗಿತ್ತು. ಅಹೋರಾತ್ರಿ ಧರಣಿ ನಡೆಸುವುದಾಗಿ ವಿರೋಧ ಪಕ್ಷಗಳು ಘೋಷಿಸಿದ ನಂತರ ನಿಗದಿತ ಅವಧಿಯ ಎರಡು ದಿನ ಮೊದಲೇ ಅಧಿವೇಶನವನ್ನು ಮುಕ್ತಾಯ ಮಾಡಲಾಗಿತ್ತು. ಸೆ. 1ರಿಂದ 10ರವರೆಗೆ ಸುಮಾರು 200 ಕಿ.ಮೀ ಪಾದಯಾತ್ರೆ ಹಮ್ಮಿಕೊಳ್ಳಲು ಬಿಜೆಪಿ ನಾಯಕರು ಸಿದ್ಧತೆ ನಡೆಸಿದ್ದರು.

## ಈಗ ಚುನಾವಣೆ ಎದುರಿಸಲು ಟನ್‌ಗಟ್ಟಲೆ ಹಣ ಬೇಕು: ಮಾಜಿ ಸಿಎಂ ಸಿದ್ದರಾಮಯ್ಯ

ಆಯಿತು ಅಂತಾ ಅಲ್ಲ. ಚುನಾವಣಾ ವ್ಯವಸ್ಥೆ ಬಹಳ ದುಬಾರಿಯಾಗಿದೆ ಅಂತಾ. ಚುನಾವಣೆ ವ್ಯವಸ್ಥೆ ಸುಧಾರಣೆ ಮಾಡದೇ ಹೋದರೆ ರಾಜಕಾರಣದಲ್ಲಿ ಪ್ರಾಮಾಣಿಕವಾಗಿ ಇರೋದಕ್ಕೆ ಸಾಧ್ಯವಿಲ್ಲ. ಇನ್ಮುಂದೆ ಲೋಕಸಭೆಗೂ ನಿಲ್ಲೊಲ್ಲ, ವಿಧಾನಸಭೆಗೂ ನಿಲ್ಲೊಲ್ಲ. ರಾಜಕಾರಣದಲ್ಲಿ ಸಕ್ರಿಯವಾಗಿ ಇರುತ್ತೇನೆ. ಈಗ ಚುನಾವಣೆ ಎದುರಿಸಲು ಟನ್ ಗಟ್ಟಲೆ ಹಣ ಬೇಕು ಎಂದರು.

ನನಗೆ ಸಂಸತ್‌ಗೆ ಹೋಗಬೇಕು ಅಂತಾ ಆಫರ್ ಬಂದಿತ್ತು. ರಿಜೆಕ್ಟ್ ಮಾಡಿದೆ. 1991ರಲ್ಲಿ ಕೊಪ್ಪಳದಿಂದ ಲೋಕಸಭೆಗೆ ನಿಂತಿದ್ದೆ. 10 ಸಾವಿರ ಮತಗಳಿಂದ ಸೋತಿದ್ದೆ. ಆಗ ಹೆಗಡೆ ಅವರು ಕೂಡ ಸೋತರು. ಅವತ್ತೆ ತೀರ್ಮಾನ ಮಾಡ್ದೆ. ಇನ್ನು ಯಾವತ್ತೂ ಲೋಕಸಭೆಗೆ ನಿಲ್ಲಬಾರದು ಅಂತಾ ಎಂದು ತಿಳಿಸಿದರು. ಸೋಷಿಯಲ್ ಮೀಡಿಯಾ ಮುಖಾಂತರ ಪ್ರಚಾರ ನಡೀಲಿ. ಹಳ್ಳಿಗಳಿಗೆ ಹೋಗೋದು ಬೇಡ. ಅಪರಾಧ ಅಂತಾ ತೀರ್ಮಾನಿಸಬೇಕು. ಚುನಾವಣಾ ಆಯೋಗದವರು ಹೇಳಿದಷ್ಟು ಹಣ ಮಾತ್ರ ಖರ್ಚು ಮಾಡಬೇಕು. 1983ಕ್ಕೂ 2023ರ ಚುನಾವಣಾಗೂ ಬಹಳಷ್ಟು ವ್ಯತ್ಯಾಸ. ಚುನಾವಣೆಯಲ್ಲಿ ಅಕ್ರಮವಾಗಿ ಹಣ ಖರ್ಚು ಮಾಡದಂತೆ, ಇದಕ್ಕೆ ಹೋರಾಟ ಮಾಡಬೇಕು. ಜನರು ಕೂಡ ಸಹಕಾರ ಮಾಡಬೇಕು

ಪ್ರಿಯ ಓದುಗರೇ ಅನಂತ ಜನಶಕ್ತಿ ದಿನ ಪತ್ರಿಕೆಯನ್ನು ತಪ್ಪದೇ ಓದಿರಿ., ಹಾಗೂ ಜಾಹೀರಾತು ನೀಡಲು ಕೂಡಲೇ ಸಂಪರ್ಕಿಸಿ

# ನಾಗೇಂದ್ರ ಸಚಿವ ಸ್ಥಾನ ನಾವು ಕಸಿದುಕೊಂಡಿಲ್ಲ : ರೆಡ್ಡಿ

ಕಣ್ಣೀರು ಹಾಕಿ ಮಾತನಾಡುವುದು ನಾಟಕದಂತಿದೆ ಸುದ್ದಿಗೋಷ್ಠಿಯಲ್ಲಿ ಪದೇ ಪದೇ 'ಮನುಸ್ಮೃತಿ', 'ಮನುವಾದ' ವಿವಿಧ ಪದಗಳನ್ನು ಪ್ರಸ್ತಾಪಿಸುತ್ತಾ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ, ಅದ್ಯಾವುದು ಇಲ್ಲಿ ಲೆಕ್ಕಕ್ಕೆ ಬರುವುದಿಲ್ಲ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಅಡಿಯಲ್ಲಿ ದೇಶ ನಡೆಯುತ್ತಿದ್ದು, ವೈಯಕ್ತಿಕ ಹಾಗೂ ಜಾತಿ ಆಧಾರಿತ ಟೀಕೆಗಳನ್ನು ಬದಿಗಿಟ್ಟು ವಾಸ್ತವಾಂಶಗಳ ಕುರಿತು ಮಾತನಾಡಬೇಕು ಎಂದರು.

ನಾಗೇಂದ್ರ ಅವರು ಶಂಬುಕನ ಕಥೆಯನ್ನು ಉಲ್ಲೇಖಿಸಿ ಮಾತನಾಡಿದರೆ ರೆಡ್ಡಿ "ವಾಲ್ಮೀಕಿ ಮಹರ್ಷಿ ಹಾಗೂ ರಾಮಾಯಣದ ಕುರಿತು ಮಾತನಾಡುವ ಮೊದಲು ಅದರ ಇತಿಹಾಸ ಮತ್ತು ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು. ಶಂಬುಕನ ಪ್ರಸಂಗವನ್ನು ಇಂದಿನ ರಾಜಕೀಯಕ್ಕೆ ಹೋಲಿಸುವುದು ಸರಿಯಲ್ಲ ಅದೇ ರೀತಿ ನಮ್ಮನ್ನು ರಿಜೆಕ್ಟ್ ಪೀಸ್ ಗಳೆಂದು ನಾಗೇಂದ್ರ ಕರೆದಿದ್ದಾನೆ ರಾಜಕಾರಣದಲ್ಲಿ ಸೋಲು ಗೆಲುವು ಸಾಮಾನ್ಯ ಮತದಾರರು ಇಂದು ನಮ್ಮನ್ನು ತಿರಸ್ಕರಿಸಿದರೆ ಮುಂದಿನ ಚುನಾವಣೆಯಲ್ಲಿ ಮತ್ತೊಬ್ಬರನ್ನು ತಿರಸ್ಕರಿಸಬಹುದು ಘಟಾನುಘಟಗಳೆ ಚುನಾವಣೆಯಲ್ಲಿ ಸೋಲು ಕಂಡಿದ್ದನ್ನು ನಾವು ನೀವು ಕಾಣಬಹುದು ಎಂದರು.'187 ಕೋಟಿ ಅಕ್ರಮದ ಬಗ್ಗೆ ದಾಖಲೆಗಳೊಂದಿಗೆ ಉತ್ತರಿಸಿ ಸರಿಯಾದ ರೀತಿಯಲ್ಲಿ ರಾಜ್ಯದ ಜನತೆ ಮುಂದೆ ಇಟ್ಟು ಸ್ಪಷ್ಟನೆ ನೀಡಿ ನಿರ್ದೋಷಿಯೆಂದು ಸಾಬೀತು ಮಾಡಿಕೊಳ್ಳುವುದು ಬಿಟ್ಟು ಅವರಿವರ ಮೇಲೆ ಗೂಬೆಕೂರಿಸುವುದು ತರವಲ್ಲ ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣಕಾಸು ಅಕ್ರಮ ಪ್ರಕರಣವನ್ನು ಪ್ರಸ್ತಾಪಿಸಿದ ಅವರು, ನಿಗಮದ ಹಣವನ್ನು ದುರ್ಬಳಕೆ ಮಾಡಲಾಗಿದೆ ಎಂಬ ಆರೋಪಗಳ ಕುರಿತು ನಾಗೇಂದ್ರ ಅವರು ಜನರಿಗೆ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

"ನನ್ನ ಪಾತ್ರವಿಲ್ಲ ಎಂದು ಹೇಳುತ್ತಿದ್ದೀರಿ. ಹಾಗಾದರೆ ಪ್ರಕರಣದಲ್ಲಿ ನಿಮ್ಮ ಪಾತ್ರವೇನು ಎಂಬುದನ್ನು ದಾಖಲೆಗಳೊಂದಿಗೆ ಸ್ಪಷ್ಟಪಡಿಸಿ. ಆರೋಪಗಳನ್ನು ಕೇವಲ ಮಾತಿನ ಮೂಲಕ ತಳ್ಳಿಹಾಕುವುದರಿಂದ ಸಾಲದು" ಎಂದು ಜನಾರ್ದನ ರೆಡ್ಡಿ ಹೇಳಿದರು. ವಾಲ್ಮೀಕಿ ನಿಗಮದ ಹಣ ಆಂಧ್ರಪ್ರದೇಶ, ತೆಲಂಗಾಣ, ಗೋವಾ ಸೇರಿದಂತೆ ಮುಂಬೈ ವಾಸಿಗಳಾದ

ನೇಹಾ ಕಲಂ ಮನ್ಸೂರಿ (29), ಜಹಾರ್ ಕಲಂ ಮನ್ಸೂರಿ (27) ಹಾಗೂ ಕಲಂ ಶಕೂರ್ ಮನ್ಸೂರಿ (52) ಎಂಬ ಮೂವರ ಖಾತೆಗಳಿಗೆ 6.5 ಕೋಟಿ ವರ್ಗಾವಣೆ ಆಗಿದೆ ಅದು ಅವರು ಯಾರು , ಅವರ ಖಾತೆಗೆ ನಿಗಮದ ಹಣ ಏಕೆ ವರ್ಗಾವಣೆಯಾಗಿದ್ದು ಎಂಬುದನ್ನು ನಾಗೇಂದ್ರ ಸ್ಪಷ್ಟಪಡಿಸಲಿ ಎಂದು ಹೇಳಿದರು. ಬಳ್ಳಾರಿಯಲ್ಲಿ ಒಬ್ಬ ನಾಗೇಂದ್ರ ಅಲ್ಲ, ಒಂದು ಲಕ್ಷ ನಾಗೇಂದ್ರರಿದ್ದಾರೆ ಎಂದಿದ್ದಾನೆ, ಆ ಲಕ್ಷ ಮಂದಿ ನಾಗೇಂದ್ರ ಗಳನ್ನು ಮೈದಾನಕ್ಕೆ ಕರೆಸಿ ನಮಗೆ ತೋರಿಸಲಿ ಎಂದು ತಾಕಿತು ಮಾಡಿದರು.

ನಾಗೇಂದ್ರ ಅವರು ಯಾವುದೇ ತಪ್ಪು ಮಾಡಿಲ್ಲ ಎನ್ನುವುದಾದರೆ, ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ರಾಜೀನಾಮೆ ಏಕೆ ಪಡೆದರು ಎಂದು ಜನಾರ್ದನ ರೆಡ್ಡಿ ಪ್ರಶ್ನಿಸಿದರು. ನಾಗೇಂದ್ರ ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡುತ್ತೇನೆ ಎಂಬ ವಿಷಯ ಪ್ರಸ್ತಾಪಿಸಿದ ರೆಡ್ಡಿ ಕೇವಲ ನಾಗೇಂದ್ರ ಒಬ್ಬನೇ ರಾಜೀನಾಮೆ ಬೇಡ ಅಖಂಡ ಬಳ್ಳಾರಿ ಜಿಲ್ಲೆಯ 10 ವಿಧಾನಸಭಾ ಕ್ಷೇತ್ರಗಳ ಶಾಸಕರು ಹಾಗೂ ಸಂಸದ ಈ ತುಕಾರಾಂ ರಾಜೀನಾಮೆ ನೀಡಿ ಮತ್ತೆ ಚುನಾವಣೆಗೆ ಬರಲಿ ಅವರೆಲ್ಲರ ಠೇವಣಿ ಕಳೆಯುತ್ತೇನೆ ಇಲ್ಲವಾದರೆ ನಾನು ರೆಡ್ಡಿಯೇ ಅಲ್ಲ ಎಂದು ಗುಟುರು ಹಾಕಿದರು.ನಾಗೇಂದ್ರ ಅವರು ಹಾಕಿರುವ ಚುನಾವಣಾ ಸವಾಲನ್ನು ಸ್ವೀಕರಿಸುತ್ತೇವೆ. ಜನರ ಮುಂದೆ ಹೋಗಿ ಜನಾದೇಶ ಪಡೆಯಲು ಸಿದ್ಧರಿದ್ದೇವೆ. ಮಾತಿನ ರಾಜಕೀಯಕ್ಕಿಂತ ಚುನಾವಣೆಯ ಮೂಲಕ ಜನರ ತೀರ್ಪು ಪಡೆಯೋಣ ಎಂದು ಜನಾರ್ದನ ರೆಡ್ಡಿ ಹೇಳಿದರು. ವಾಲ್ಮೀಕಿ ಅಗ್ರಣಕ್ಕೆ ಪರೋಕ್ಷವಾಗಿ ಕಾರಣರಾದ ಸಂಸದ ಇ.ತುಕಾರಾಂ ಅವರ ಪತ್ನಿ ಅನ್ನಪೂರ್ಣ ತುಕಾರಾಂ ಅವರಿಗೆ ಸಚಿವ ಸ್ಥಾನ ನೀಡಿದರೆ ಹೋರಾಟ ಮುಂದುವರಿಸುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜನಾರ್ದನ ರೆಡ್ಡಿ, "ಹೌದು, ಹೋರಾಟ ಮುಂದುವರಿಯಲಿದೆ, ವಾಲ್ಮೀಕಿ ನಿಗಮದ ಹಣಕಾಸು ಅಕ್ರಮ ಪ್ರಕರಣದಲ್ಲಿ ಸಂಸದ ತುಕಾರಾಂ ಅವರ ಪಾತ್ರದ ಕುರಿತು ಆರೋಪಗಳಿದ್ದು, ಈ ಬಗ್ಗೆ ಸಾಕ್ಷ್ಯ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ ದಾಖಲೆಗಳು ಕೈ ಸೇರಿದ ಮೇಲೆ ಸಂಸದ ತುಕಾರಾಮ್ ಮತ್ತು ಅವರ ಪತ್ನಿಯ ವಿರುದ್ಧ ಹೋರಾಟವನ್ನು ರೂಪಿಸಲಾಗುವುದು ಎಂದರು. ಗೋಷ್ಠಿಯಲ್ಲಿ ನಗರ ಮಾಜಿ ಶಾಸಕ ರೆಡ್ಡಿ, ಮಾಜಿ ಬುಡ ಅಧ್ಯಕ್ಷ ಗುರು ಲಿಂಗನಗೌಡ, ಕೆ ಎಸ್ ದಿವಾಕರ್, ದರಪ್ಪ ನಾಯಕ, ಎಚ್ ಹನುಮಂತಪ್ಪ, ಓಬಳೇಶ್, ಸುಗುಣ, ಸುನಂದ ಹಿರೇಮಠ್ ಸೇರಿದಂತೆ ಇತರರು ಇದ್ದರು.

# ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯಗೆ ಸ್ವಾಗತ ಕೋರಿದ ಕಾಂಗ್ರೆಸ್ ಮುಖಂಡರು



ಬಳ್ಳಾರಿ : ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಅವರು ಭಾನುವಾರ ಬಳ್ಳಾರಿ ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ಜಿಂದಾಲ್ ವಿಮಾನ ನಿಲ್ದಾಣದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಜನಪ್ರತಿನಿಧಿಗಳು ಆತ್ಮೀಯವಾಗಿ ಸ್ವಾಗತಿಸಿದರು.

ಭಾನುವಾರ ಬೆಳಿಗ್ಗೆ 11 ಗಂಟೆಗೆ ತೋರಣಗಲ್ಲಿನ ಜಿಂದಾಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಚಿವ ಯತೀಂದ್ರ ಸಿದ್ದರಾಮಯ್ಯ ಅವರನ್ನು ಬಳ್ಳಾರಿ ಲೋಕಸಭಾ ಸದಸ್ಯ ಇ. ತುಕಾರಾಂ, ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯುಲು, ಬಳ್ಳಾರಿ ಮಹಾಪೌರ ಪಿ. ಗಾದೆಪ್ಪ, ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಎಸ್.ಎಲ್. ಸ್ವಾಮಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಸ್ವಾಗತ ಕೋರಿದರು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಬೋಯಪಾಟಿ ವಿಷ್ಣುವರ್ಧನ, ನಗರ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಕೆ. ಶ್ರೀನಿವಾಸುಲು, ಬಳ್ಳಾರಿ ಮಹಾನಗರ ಪಾಲಿಕೆ ಸದಸ್ಯರಾದ ಕುಬೇರ್, ವಿಕ್ಕಿ, ಮಲ್ಲೇಶಪ್ಪ, ರಘು, ಪ್ರತಾಪ್, ಸತ್ಯಪ್ಪ ಹಾಗೂ ಕಿಶೋರ್ ಪಾಲಿಕೆ ಆಯುಕ್ತ ಮಂಜುನಾಥ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ದಲಿತ ಯುವತಿ ಆಶ್ವಿನಿ ಮೇಲೆ ದೌರ್ಜನ್ಯ ಕಠಿಣ ಕ್ರಮಕ್ಕೆ ರಾಜ್ಯಾಧ್ಯಕ್ಷೆ ಶಾಂತ ಆಗ್ರಹ




ಬಳ್ಳಾರಿ : ಯುವತಿ ಆಶ್ವಿನಿ ಬಹಿರ್ದೆಸೆಗೆ ಮನೆಯಿಂದ ಹೊರಗೆ ತೆರಳಿದ್ದ ಸಂದರ್ಭದಲ್ಲಿ ದುಷ್ಕರ್ಮಿಗಳು ಅಪಹರಿಸಿ ಅತ್ಯಾಚಾರ ಎಸಗಿ, ಕೊಲೆ ಮಾಡಿರುವುದು ಅತ್ಯಂತ ಪೈಶಾಚಿಕ ಕೃತ್ಯವಾಗಿದೆ ರಾಜ್ಯದಲ್ಲಿ ದಲಿತರು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ದಲಿತ ಯುವತಿಯರ ಮೇಲೆ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ, ತಪ್ಪಿತಸ್ಥರು ಯಾರೇ ಆಗಿದ್ದರೂ ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ನಿಷ್ಪಕ್ಷಪಾತ ತನಿಖೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಆರ್. ಗುರುಮೂರ್ತಿ ಬಣ) ಮಹಿಳಾ ಘಟಕದ ರಾಜ್ಯ ಅಧ್ಯಕ್ಷರಾದ ಶಾಂತ ಗೃಹ ಇಲಾಖೆಯನ್ನು ಆಗ್ರಹಿಸಿದರು.

ಅವರು ಶನಿವಾರದಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಆರ್. ಗುರುಮೂರ್ತಿ ಬಣ) ಮಹಿಳಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿ, ಸಂತ್ರಸ್ತೆಯ ಕುಟುಂಬಕ್ಕೆ ಸೂಕ್ತ ಪರಿಹಾರ, ಪುನರ್ವಸತಿ ಹಾಗೂ ಅಗತ್ಯ ಭದ್ರತೆ ಒದಗಿಸಬೇಕು. ರಾಜ್ಯದಲ್ಲಿ ದಲಿತ ಸಮುದಾಯದ ಮೇಲಿನ ದೌರ್ಜನ್ಯಗಳಿಗೆ ಕಡಿವಾಣ ಹಾಕಲು ಸರ್ಕಾರ ಮತ್ತು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇತ್ತೀಚಿಗೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಹದ್ದಿನಹಾಳ ಗ್ರಾಮದ ದಲಿತ ಮುಖಂಡ ಭೂಮಾನಂದ ಅವರನ್ನು ಜಾತಿ ಆಧಾರಿತವಾಗಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿರುವ ಪ್ರಕರಣ ಹಾಗೂ ದಾವಣಗೆರೆ ಜಿಲ್ಲೆಯ ಬೆಳ್ಳಾಳಗೆರೆ ಗ್ರಾಮದಲ್ಲಿ ದೇವಾಲಯ ಪ್ರವೇಶಕ್ಕೆ ತೆರಳಿದ್ದ ದಲಿತ ಯುವಕರನ್ನು ಕಂಬಕ್ಕೆ ಕಟ್ಟಿ ಹಲ್ಲೆ ನಡೆಸಿದ ಘಟನೆ ಸೇರಿದಂತೆ ಕೊಪ್ಪಳ ಜಿಲ್ಲೆಯ ಬೌಚನಹಳ್ಳಿ ಗ್ರಾಮದಲ್ಲಿ ದಲಿತ ಕೇರಿಗೆ ನುಗ್ಗಿ ಹಲ್ಲೆ ನಡೆಸಿರುವ ಘಟನೆ ಸೇರಿದಂತೆ ರಾಜ್ಯದ ವಿವಿಧೆಡೆ ದಲಿತರ ಮೇಲಿನ ದೌರ್ಜನ್ಯಗಳು ನಡೆಯುತ್ತಿವೆ. ಇಂತಹ ಘಟನೆಗಳಿಗೆ ಕಡಿವಾಣ ಹಾಕಲು ಸರ್ಕಾರ ತಕ್ಷಣ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷೆ ಎಂ. ಶಾಂತ, ಮಹಿಳಾ ಘಟಕದ ಬಳ್ಳಾರಿ ಜಿಲ್ಲಾಧ್ಯಕ್ಷೆ ಎಂ.ಪಿ. ಕಮಲ, ಕಾರ್ಯದರ್ಶಿ ಪಿ. ಅಂಜನಿ, ರಾಜ್ಯ ಕಾರ್ಯದರ್ಶಿ ದ್ರಾಕ್ಷಾಯಿಣಿ, ಜಿಲ್ಲಾ ಉಪಾಧ್ಯಕ್ಷರಾದ ಉಮಾದೇವಿ ಹಾಗೂ ಸೀತಮ್ಮ ಸೇರಿದಂತೆ ಪದಾಧಿಕಾರಿಗಳು ಮತ್ತು ಸದಸ್ಯರು ಇದ್ದರು.

# ಶಿವಯೋಗಿ ಸಿದ್ಧರಾಮೇಶ್ವರ ಪುರಾಣ ಪ್ರವಚನಕ್ಕೆ ಚಾಲನೆ



ಬಳ್ಳಾರಿ : ಹನ್ನೆರಡನೇ ಶತಮಾನದ ಶಿವಶರಣ, ಕಾಯಕಯೋಗಿ ಶಿವನ ಪರಮಾವತಾರಿ ಶ್ರೀ ಸೊನ್ನಲಿಗೆಯ ಸಿದ್ಧರಾಮ ಶಿವಯೋಗಿಯ ಜೀವನ ದರ್ಶನದ ಕುರಿತಾದ ಪುರಾಣ ಪ್ರವಚನ ಕಾರ್ಯಕ್ರಮಕ್ಕೆ, ಗಡಿ ಭಾಗದ ದಂಡಿನ ಹಿರೇಹಾಳು ಗ್ರಾಮದ ಕೋಟೆ ಪ್ರಾಂತ್ಯದಲ್ಲಿ ಚಾಲನೆ ನೀಡಲಾಯಿತು. ಶ್ರಾವಣ ಮಾಸದ ಪ್ರಯುಕ್ತ ಒಂದು ತಿಂಗಳು ನಿರಂತರವಾಗಿ ನಡೆಯುವ ಪುರಾಣ ಪ್ರವಚನವನ್ನು ಅಮಾತಿ ಬಸವರಾಜ್ ನಡೆಸಿಕೊಡುವರು, ಕಾರ್ಯಕ್ರಮಕ್ಕೆ ಗ್ರಾಮದ ಹರ ಗುರು ಚರಮೂರ್ತಿಗಳು ಹಿರಿಯರು ಚಾಲನೆಯನ್ನು ನೀಡಿದರು. ಇದೇ ತಿಂಗಳ 28ನೇ ತಾರೀಖಿನಂದು ಸುಮಂಗಲಿಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಈ ಪುರಾಣ ಪ್ರವಚನ ಕಾರ್ಯಕ್ರಮವು ಸೆಪ್ಟಂಬರ್ 12ರಂದು ಮಹಾಮಂಗಳಗೊಳ್ಳುವುದು ಎಂದು ಸಂಘಟಕರು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಪುರಾಣ ಪ್ರವಚನಕಾರರಾಗಿ ಬಸವರಾಜ ಅಮಾತಿ, ಕನ್ನಡ ಸಹಾಯಕ ಪ್ರಾಧ್ಯಾಪಕರು ಇಂಡೋ ಅಮೆರಿಕನ್ ಪದವಿ ಕಾಲೇಜು, ಬಳ್ಳಾರಿ. ಸಂಗೀತ ಮತ್ತು ಪುರಾಣ ಪಠಣಕಾರರಾಗಿ ಶ್ರೀ ಜಗನ್ನಾಥ ಗವಾಯಿಗಳು ಡಿ ಹಿರೇಹಾಳು, ತಬಲವಾದಕರಾಗಿ ಶ್ರೀ ಯೋಗೀಶ್ ಬಣಗಾರ ಸಂಗನಕಲ್ಲು ಇವರ ಸಾರಥ್ಯದಲ್ಲಿ ಪುರಾಣ ಪ್ರವಚನವು ಸಾಗಿ ಬರುತ್ತಿದೆ.ಸದರಿ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ಹವಳದ ಎರ್ರಿಸ್ವಾಮಿ, ನಿವೃತ್ತ ಶಿಕ್ಷಕರಾದ ಹವಳದ ನಾಗೇಶಪ್ಪ, ಸಿದ್ದಯ್ಯ ಸ್ವಾಮಿ, ಮೃತ್ಯುಂಜಯ ಸ್ವಾಮಿ ಮಹಾಬಲೇಶ್ವರ, ವಿಜಯಕುಮಾರ ಮುಂತಾದವರು ಉಪಸ್ಥಿತರಿದ್ದರು. ಪುರಾಣ ಶ್ರವಣ ಮಾಡಲು ಡಿ ಹಿರೇಹಾಳು ಮತ್ತು ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಶ್ರಾವಣ ಬಂತು ಎಂದರೆ ಕರಿಯಣ್ಣ ಮತ್ತು ಕೆಂಚಣ್ಣರಿಗೆ ಬೇಡಿಕೆ ಕುಂಚ ಕಲಾವಿದ ದುಂಡು ಮಹದೇವ್ ಕೈಲಿ ಮೂಡಿದ ದೇವರ ಮೂರ್ತಿಗಳು



ವರದಿ : ಅನಿಲ್ ಕುಮಾರ್ ಗೂಳಿಪುರ

ಯಳಂದೂರು : ರಾಜ್ಯದ ದಕ್ಷಿಣ ಭಾಗದಲ್ಲಿ ಆಷಾಡ ಮುಗಿದು ಶ್ರಾವಣ ಬರುವ ಸಂದರ್ಭದಲ್ಲಿ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಆರಾಧ್ಯ ದೈವ ಶ್ರೀ ಬಿಳಿಗಿರಿ ರಂಗನಾಥ ಸ್ವಾಮಿಯ ಭಕ್ತರು ಪ್ರತಿ ಮನೆಯಲ್ಲೂ ಶ್ರಾವಣ ಮಾಸದ ಸಂದರ್ಭದಲ್ಲಿ ದೇವರ ಪೂಜೆ ಕಾರ್ಯವನ್ನು ನಡೆಸಿಕೊಂಡು ಬಂದಿರುವುದು ವಾಡಕೆಯಾಗಿದೆ,

ಕರಿಯಣ್ಣ – ಕೆಂಚಣ್ಣ ಎಂಬ ದೇವರ ಹರಿಗೆಯ ಜೊತೆ ಶಂಕ,ಜಾಗಟೆ, ಜೋಲಿಗೆ ಜೊತೆಗೆ ಮನೆ ಮನೆಗೆ ಹೋಗಿ

ದೇವರ ಪೂಜೆ ಸಲ್ಲಿಸಿ ತಮ್ಮ ಮನೆ ಇಷ್ಟಾರ್ಥ ಸಿದ್ದಿ ಸಲ್ಲಿಸುವಂತೆ ಪ್ರಾರ್ಥನೆ ಮಾಡುತ್ತಾರೆ, ಹಾಗಾಗಿ ಈ ಭಾಗದ ಜನರು ಈ ದೇವರ ಮೂರ್ತಿಯನ್ನು ಆರಾಧ್ಯ ದೈವನೆಂದು ನಂಬಿದ್ದು ಈ ಮೂರ್ತಿಯನ್ನು ಯಳಂದೂರು ಪಟ್ಟಣದ ಅರಣ್ಯ ಇಲಾಖೆಯ ಮುಂಭಾಗವಿರುವ ದುಂಡು ಆರ್ಟ್ಸ್ ಗ್ಯಾಲರಿ ಯಲ್ಲಿ ಸುಮಾರು ವರ್ಷಗಳಿಂದಲೂ ಚಿತ್ರ ವಿನ್ಯಾಸ ಮಾಡುತ್ತಿದ್ದು ಚಿತ್ರಕಲೆ ಜೊತೆಗೆ ಮಾರಾಟವನ್ನು ಸಹ ಮಾಡುತ್ತಿದ್ದಾರೆ, ಹರಿಸೇವೆಯ ಭಕ್ತರು ಇದನ್ನು ಕೊಂಡುಕೊಳ್ಳಬಹುದು ಎಂದು ಕುಂಚ ಕಲಾವಿದ ದುಂಡು ಮಹದೇವ್ ತಿಳಿಸಿದ್ದಾರೆ.

ಇವರು ಜಲವರ್ಣ, ಆಕ್ರಲಿಕ್ ಮಾಧ್ಯಮದಲ್ಲಿ ನೈಜಕಲಾಕೃತಿ, ಸಮಕಾಲಿನ ಕಲಾಕೃತಿ, ಅಮೃತ ಚಿತ್ರಕಲೆ ಸೇರಿದಂತೆ ಪ್ರಕೃತಿ ಚಿತ್ರ, ಭಾವಚಿತ್ರ ಹಾಗೂ ದೇವರ ಚಿತ್ರಗಳನ್ನು ಬರೆಯುವುದರ ಮೂಲಕ ರಾಜ್ಯದಲ್ಲಿ ಹಾಗೂ ಚಾಮರಾಜನಗರದ ಹೆಸರಾಂತ ಚಿತ್ರ ಕಲಾವಿದರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಯಳಂದೂರಿನಲ್ಲಿ ದುಂಡು ಮಹದೇವ ರವರ ಸ್ವಂತ "ದುಂಡು ಆರ್ಟ್ಸ್ ಗ್ಯಾಲರಿ" ಯನ್ನು ಅರಣ್ಯ ಇಲಾಖೆ ಮುಂಭಾಗ ತೆರೆದಿದ್ದು ಇದು ಚಾಮರಾಜನಗರ ಜಿಲ್ಲೆಯಲ್ಲಿ ಮೊಟ್ಟಮೊದಲ ಆರ್ಟ್ಸ್ ಗ್ಯಾಲರಿ ಆಗಿದೆ, ಈ ಸ್ಥಳದಲ್ಲಿ ಕಲಾತೃತೀಯ ಪ್ರದರ್ಶನ ಇದ್ದು ಇಲ್ಲಿಗೆ ಶಾಲಾ ಮಕ್ಕಳು ಹಾಗೂ ಹಲವಾರು ಕಲಾವಿದರು ಭೇಟಿ ನೀಡಿ ಕಲಾಕೃತಿ ಗಳಿಗೆ ಮನಸೋತಿದ್ದು ಮಾರಾಟವು ಸಹ ನಡೆಯುತ್ತಿದೆ, ದುಂಡು ಆರ್ಟ್ಸ್ ಗ್ಯಾಲರಿಯಲ್ಲಿ ಅತ್ಯದ್ಭುತವಾದ ಕಲಾಕೃತಿಗಳ ಪ್ರದರ್ಶನವನ್ನು ಮಾಡಬಹುದು ಎಂದು ಕುಂಚ ಕಲಾವಿದ ದುಂಡು ಮಹದೇವ್ ತಿಳಿಸಿದ್ದಾರೆ.

ಕರ್ನಾಟಕದ ಜಾನಪದ ಪುರಾಣ ಮತ್ತು ದೈವ ಆರಾಧನೆಯಲ್ಲಿ ಬರುವ ದೈವಗಳು. ಇವರು ವಿಷ್ಣುವಿನ ಶಾಪದಿಂದ ಭೂಮಿಯಲ್ಲಿ ಜಯ–ವಿಜಯರೆಂಬ ದೈವಗಳಾಗಿ ನೆಲೆಸಿದ್ದಾರೆ ಎಂದು ನಂಬಲಾಗಿದೆ. ದೈವ ಆರಾಧಕರು ಅತ್ತಿಮರ ಅಥವಾ ದೇವಭೂತಾಳೆ ಮರದಿಂದ ಮಾಡಿದ ವಿಗ್ರಹಗಳನ್ನು ಹಿಡಿದು ಪೂಜಿಸುತ್ತಾರೆ, ವಿಷ್ಣುವಿನ ನಾಮಸ್ಮರಣೆಗೆ ಇವರು ಕೋಪಗೊಳ್ಳುತ್ತಾರೆ ಎಂಬ ನಂಬಿಕೆ ಇದೆ.

**ಈ ಕಲಾಕೃತಿಯನ್ನು ತಯಾರಿಸಲು 10 ರಿಂದ15 ದಿನ ಕೆಲಸ ಇಡಿಯುತ್ತದೆ, ಇದನ್ನ ತೆಗೆದುಕೊಂಡು ಹೋಗಲು ಇಲ್ಲಿ ಸಂಪ್ರದಾಯದಂತೆ ಪೂಜೆ ಸಲ್ಲಿಸಿ, ಕಣ್ಣು ತೆರೆಸಿ ಅದನ್ನ ಮನೆಗೆ ತೆಗೆದುಕೊಂಡು ಹೋಗುತ್ತಾರೆ, ನಂತರ ಅವರ ಮನೆಯಲ್ಲಿ ವಿಧಿ ವಿಧಾನಗಳಲ್ಲಿ ಪೂಜೆ ಸಲ್ಲಿಸಿ ಸಂತೃಪ್ತಿ ಪಡೆಯುತ್ತಾರೆ ಎಂದು ಕುಂಚ ಕಲಾವಿದ ದುಂಡು ಮಹದೇವ್ ತಿಳಿಸಿದರು.**

**ಕರಿಯಣ್ಣ ಮತ್ತು ಕೆಂಚಣ್ಣ**

**ಆರಾಧಕರು ಇವರ ವಿಗ್ರಹಗಳನ್ನು ಕೈಯಲ್ಲಿ ಹಿಡಿದು, ಮತ್ತೊಂದು ಕೈಯಲ್ಲಿ ಕತ್ತಿ ಹಿಡಿದು ದೈವ ನರ್ತನ ಮಾಡುತ್ತಾರೆ, ಇವರು ಲಕ್ಷ್ಮೀನರಸಿಂಹ ಸ್ವಾಮಿಯ ಭಕ್ತರಿಂದ ವಿಷ್ಣುವಿನ ಕೀರ್ತನೆಗಳನ್ನು ಕೇಳಿ ಕೋಪಗೊಂಡು, ಭಕ್ತರ ಮೇಲೆ ನುಗ್ಗುತ್ತಾರೆ, ಕೋಪಗೊಂಡ ದೈವಗಳನ್ನು ಸಮಾಧಾನಪಡಿಸಲು ಬಾಳೆಹಣ್ಣು, ಹಲಸಿನ ಹಣ್ಣಿನ ರಸಾಯನವನ್ನು ಬಾಯಿಗೆ ಹಾಕಲಾಗುತ್ತದೆ.ಇವರು ಪ್ರಧಾನವಾಗಿ ಗ್ರಾಮೀಣ ಭಾಗದ ಆರಾಧನಾ ದೈವಗಳಾಗಿದ್ದು, ವಿಶೇಷ ಹಬ್ಬಗಳ ಸಂದರ್ಭದಲ್ಲಿ ಇವರ ಪೂಜೆ ನಡೆಯುತ್ತದೆ.**

**ಕಲಾವಿದ ದುಂಡು ಮಹದೇವ್.**

# ಶ್ರೀವಾಸವಿ ವಿದ್ಯಾಲಯದಲ್ಲಿ 'ನಾಲೆಡ್ಜ್ ನಾಕ್‌ಔಟ್'



ಬಳ್ಳಾರಿ : ವಾಸವಿ ಶಾಲೆಯಲ್ಲಿ ನಾಲೆ ನಾಕ್ ಔಟ್ ಎಂಬ ನಾಲ್ಕನೇ ಆವೃತ್ತಿಯ ಪರೀಕ್ಷಾ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ತಿಳಿಯಬೇಕು, ಕಲಿಯಬೇಕು ಮತ್ತು ಸಾಧಿಸಬೇಕು' ಎಂಬ ಹಂಬಲವನ್ನು ಮೂಡಿಸುವುದರ ಜೊತೆಗೆ ಆತ್ಮವಿಶ್ವಾಸ ಹಾಗೂ ಆರೋಗ್ಯಕರ ಸ್ಪರ್ಧಾ ಮನೋಭಾವವನ್ನು ಬೆಳೆಸುತ್ತವೆ ಎಂದು ಆರ್. ಎಸ್.ಬಿ. ಚಾರಿಟೇಬಲ್ ಟ್ರಸ್ಟ್ ಆಡಳಿತ ಮಂಡಳಿಯ ಜಯಪ್ರಕಾಶ್ ಗುಪ್ತ ಅಭಿಪ್ರಾಯಪಟ್ಟರು.

ಅವರು ಇಂದು ನಗರದ ಕಂಟೋನ್ಮೆಂಟ್ ಪ್ರದೇಶದಲ್ಲಿರುವ ವಾಸವಿ ಶಾಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನ, ತಾರ್ಕಿಕ ಚಿಂತನೆ, ಸ್ಪರ್ಧಾತ್ಮಕ ಮನೋಭಾವ ಹಾಗೂ ಬೌದ್ಧಿಕ ಸಾಮರ್ಥ್ಯ ವನ್ನು ಬೆಳೆಸುವ ಉದ್ದೇಶದಿಂದ ನಾಲೆಡ್ಜ್ ನಾಕ್ ಔಟ್' ಅಂತರ ಶಾಲಾ ಸಾಮಾನ್ಯ ಜ್ಞಾನ ಸ್ಪರ್ಧೆಯ 4ನೇ ಆವೃತ್ತಿಯಲ್ಲಿ ಭಾಗವಹಿಸಿ ಮಾತನಾಡಿದರು.ಸ್ಪರ್ಧೆಯಲ್ಲಿ 5 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಹಾಗೂ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ಈ ಸ್ಪರ್ಧೆಯು ಬಹು ಆಯ್ಕೆ ಪ್ರಶ್ನೆಗಳ ಮಾದರಿಯಲ್ಲಿ ಒಟ್ಟು 50 ಅಂಕಗಳಿಗೆ ನಿಗದಿಗೊಳಿಸಲಾಗಿತ್ತು .

ಸ್ಪರ್ಧೆಯಲ್ಲಿ ಗಣಿತ, ವಿಜ್ಞಾನ, ಕನ್ನಡ ವ್ಯಾಕರಣ, ಇಂಗ್ಲಿಷ್ ವ್ಯಾಕರಣ ಹಾಗೂ ಸಾಮಾನ್ಯ ಜ್ಞಾನ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳಿದ್ದು, ವಿದ್ಯಾರ್ಥಿಗಳು ತಮ್ಮ ಜ್ಞಾನ, ನೆನಪಿನ ಶಕ್ತಿ, ವೇಗ ಹಾಗೂ ವಿಶ್ಲೇಷಣಾ ಸಾಮರ್ಥ್ಯ ವನ್ನು ಬಳಸಿಕೊಂಡು ಉತ್ಸಾಹದಿಂದ ಪರೀಕ್ಷೆಯಲ್ಲಿ ಸುಮಾರು 50 ಶಾಲೆಗಳಿಂದ 1,300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಈ ಪರೀಕ್ಷೆಯಲ್ಲಿ ಭಾಗವಹಿಸಿದ

5, 6, 7 ಮತ್ತು 8ನೇ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ವಿತರಿಸಲಾಯಿತು ಎಂದು ಅವರು ತಿಳಿಸಿದರು.ಶ್ರೀವಾಸವಿ ಎಜುಕೇಷನ್ ಟ್ರಸ್ಟ್ನ ಪದಾಧಿಕಾರಿಗಳು, ಶಾಲೆಯ ಮುಖ್ಯಸ್ಥರು, ಶಿಕ್ಷಕರು ಹಾಗೂ ಸಿಬ್ಬಂದಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ವಿದ್ಯಾರ್ಥಿಗಳ ಜ್ಞಾನವನ್ನು ಪರೀಕ್ಷಿಸುವುದರ ಜೊತೆಗೆ, ಜ್ಞಾನಾರ್ಜನೆಯೇ ನಿರಂತರ ಪಯಣ ಎಂಬ ಸಂದೇಶವನ್ನು ಸಾರಿದ 'ನಾಲೆಡ್ಜ್ ನಾಕ್ ಔಟ್' ಸ್ಪರ್ಧೆ ಎಲ್ಲರ ಗಮನ ಸೆಳೆಯಿತು.

# ವಚನ ಸಾಹಿತ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಬದುಕು ಸಾರ್ಥಕ : ಕಲ್ಯಾಣಸ್ವಾಮಿ



ಬಳ್ಳಾರಿ : ವಚನ ಸಾಹಿತ್ಯವನ್ನು ಬೋಧನೆ ಮತ್ತು ಅಧ್ಯಯನಕ್ಕೆ ಮಾತ್ರ ಸೀಮಿತಗೊಳಿಸದೆ ಅದರಲ್ಲಿರುವ ವಿಚಾರಗಳನ್ನು ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗಲು ಸಾಧ್ಯವೆಂದು ಕಲ್ಯಾಣ ಸ್ವಾಮಿ ಮಠದ ಶ್ರೀ ಕಲ್ಯಾಣ ಸ್ವಾಮಿಗಳು ಹೇಳಿದರು.

ಅವರು ನಗರದ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಪೂಜ್ಯ ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಮತ್ತು ಲಿಂ.ಹಾವಿನಾಳು ಬಸಣ್ಣ ಮತ್ತು ರುದ್ರಮ್ಮ ದತ್ತಿ ಲಿಂ.ಎಲೆ ಮಲ್ಲೇಶಪ್ಪ ಯಡವಳ್ಳಿ ಪಂಚಾಕ್ಷರಪ್ಪ ದತ್ತಿ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿ,

ಸ್ವಾಸ್ಥ್ಯ ಸಮಾಜ ರೂಪಿಸಲು, ಮಾನವೀಯ ಮೌಲ್ಯವನ್ನು ಒಳಗೊಂಡಿರುವ ಬದುಕನ್ನು ಕಟ್ಟಿಕೊಳ್ಳಲು ಹಾಗೂ ಉತ್ತಮ ವ್ಯಕ್ತಿತ್ವ ಹೊಂದಲು ವಚನ ಸಾಹಿತ್ಯದ ಅಧ್ಯಯನದ ಜೊತೆಗೆ ಅದರಂತೆ ನಡೆಯುವದು ಕೂಡ ಇಂದು ತುಂಬಾ ಅಗತ್ಯವಿದೆ, ಲೌಕಿಕ ಬದುಕಿನಲ್ಲಿ ನೈತಿಕ ಮೌಲ್ಯಗಳು ಕಣ್ಮರೆಯಾಗುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ದತ್ತಿ ದಾನಿಗಳಾದ ಹಾವಿನಾಳ್ ಶರಣಬಸಪ್ಪ,ಹಾವಿನಾಳ್ ಸೂಗಪ್ಪ ,ಬಿ.ಪಿ.ಯಡವಳ್ಳಿ ಮತ್ತು ಕೆ.ಎಂ.ಗುರುಪಾದಯ್ಯ ಉಪಸ್ಥಿತರಿದ್ದರು.

ವೀರಶೈವ ಮಹಾ ವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ಜಿ.ಮಲ್ಲನಗೌಡ,ಗಡಿನಾಡ ಕನ್ನಡ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಗಿರಿಜಾಪತಿ,ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಮಧುಮತಿ ಪಾಟೀಲ್ ಅವರನ್ನು ಸನ್ಮಾನಿಸಲಾಯಿತು.

ಶರಣ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಸಿದ್ದರಾಮ ಕಲ್ಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.ಕನ್ನಡ ಅಧ್ಯಾಪಕ ಸಿ.ಕೊಟ್ರೇಶ್ ಸ್ವಾಗತಿಸಿದರು.ಪ್ರಭಾರಿ ಪ್ರಾಂಶುಪಾಲ ಮರಿಗಾದಿಲಿಂಗಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿನಿ ವಿಜಯಲಕ್ಷ್ಮಿ ನಿರೂಪಿಸಿ,ವಂದಿಸಿದರು.

ಗಾಯಕ ಡಿ.ಎಸ್.ಗಣೇಶ್ ಗೀತ ಗಾಯನ ನಡೆಸಿಕೊಟ್ಟರು.

# ಉತ್ತಮ ಸಮಾಜ ನಿರ್ಮಾಣ ಎಲ್ಲರ ಜವಾಬ್ದಾರಿ

ಹೂವಿನಹಡಗಲಿ: ಶರಣರು ಈ ನಾಡಿನಲ್ಲಿ ಸಮಾನತೆಯ ಕ್ರಾಂತಿ ಮಾಡಿದ್ದಾರೆ. ಅವರ ವಿಚಾರಧಾರೆಗಳು ಇಂದಿಗೂ ಜೀವಂತ ಎಂದು ಪ್ರಾಧ್ಯಾಪಕ ಡಾ.ಮಂಜುನಾಥ ಹಾಲಸ್ವಾಮಿ ಹೇಳಿದರು.

ಶಾಖಾಗವಿಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ತಾಲೂಕು ಶರಣ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದರು. ಶರಣರ ಬದುಕಿನ ತತ್ವಗಳನ್ನು ಯುವಕರು ಅಳವಡಿಸಿಕೊಳ್ಳಬೇಕು. ಕಾಯಕ, ದಾಸೋಹ, ಸಮಾನತೆ ಸಾರಿ ಅಸಮಾನತೆ ಹೋಗಲಾಡಿಸಲು ಪ್ರಯತ್ನಿಸಿದ್ದಾರೆ. ಉತ್ತಮ ಸಮಾಜ ನಿರ್ಮಾಣದ ಎಲ್ಲರ ಜವಾಬ್ದಾರಿ ಎಂದರು.

ಕದಳಿ ವೇದಿಕೆ ತಾಲೂಕು ಅಧ್ಯಕ್ಷೆ ಡಾ.ಶೈಲಜಾ ಪವಾಡಶೆಟ್ರ, ಶಸಾಪ ತಾಲೂಕು ಅಧ್ಯಕ್ಷ ಟಿ.ಎಂ.ನಾಗಭೂಷಣ, ಯುವ ಘಟಕದ ಅಧ್ಯಕ್ಷ ಎಂ.ದಯಾನಂದ, ಕಾರ್ಯದರ್ಶಿ ಎಚ್.ಬಿ.ರಾಜೇಶ, ಪ್ರಮುಖರಾದ ನಾಗರಾಜ ಮಲ್ಕಿ ಒಡೆಯರ, ಬಿಚ್ಚುಗತ್ತಿ ಖಾಜಾ, ಸುನಿತಾ ನಟ–ರಾಜ್, ಜಾತಪ್ಪ, ಚನ್ನಬಸಯ್ಯ ಇತರರಿದ್ದರು.



# ಕಲ್ಲೇಶ್ವರ ದೇವಸ್ಥಾನ ಜಮೀನು ಮಾರಾಟ : ಕ್ರಮಕ್ಕೆ ಕಾವಲಿ ಮಾರೆಣ್ಣ ಆಗ್ರಹ




ಬಳ್ಳಾರಿ : ತಾಲೂಕಿನ ರೂಪನಗೂಡಿ ಹೋಬಳಿಯ ಎತ್ತಿನಬೂದಿಹಾಳು ಗ್ರಾಮದ ಸರ್ವೆ ನಂ.55, ವಿಸ್ತೀರ್ಣ 17.01 ಎಕರೆ ಜಮೀನು ಶ್ರೀ ಕಲ್ಲೇಶ್ವರ ಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಿದ್ದು, ಈ ಜಮೀನಿನನ್ನು ದೇವಸ್ಥಾನದ ಅರ್ಚಕರು ಎಂದು ಸುಳ್ಳು ಹೇಳಿ ಮಾರಾಟ ಮಾಡಿದವರ ಮೇಲೆ ಕಲಂ 145 ಸಿಆರ್‌ಪಿಸಿ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಕೀಲರಾದ ಜೆ ರಾಮಣ್ಣ ಮತ್ತು ಕಲ್ಲೇಶ್ವರ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಕಾವಲಿ ಮಾರಣ್ಣ ಸಂಬಂಧಿಸಿದ ಅಧಿಕಾರಿಗಳಲ್ಲಿ ಒತ್ತಾಯಿಸಿದರು.ಅವರು ಇಂದು ನಗರದ ಪತ್ರಿಕಾಭವನದಲ್ಲಿ ಪತ್ರಿಕೆಯ ಗೋಷ್ಠಿ ನಡೆಸಿ ಮಾತನಾಡಿ

ದೇವಸ್ಥಾನಕ್ಕೆ ಸಂಬಂಧಪಟ್ಟ ಈ ಜಮೀನನ್ನು ಅರ್ಚಕರ ಕುಟುಂಬದವರು 48 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ.ಜಮೀನು ಮಾರಾಟಕ್ಕೂ ಮುನ್ನವೇ ಈ ಕುರಿತು 1ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.ನಂ.233/2015ರ ದಾವೆ ದಾಖಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ, ಜಮೀನು ದೇವಸ್ಥಾನಕ್ಕೆ ಸಂಬಂಧಪಟ್ಟಿರುವುದರಿಂದ ಅರ್ಚಕರು ಅಥವಾ ಅವರ ಸಂಬಂಧಪಟ್ಟವರು ದೇವಸ್ಥಾನದ ಜಮೀನನ್ನು ಮಾರಾಟ ಮಾಡಬಾರದು ಎಂದು ಆದೇಶ ನೀಡಿದ್ದು ಎಂದು ರಾಮಣ್ಣ ಅವರು ತಿಳಿಸಿದರು.ನ್ಯಾಯಾಲಯದ ವಿಚಾರ ಹಾಗೂ ಜಮೀನಿನ ಸ್ವರೂಪದ ಬಗ್ಗೆ ತಿಳಿದಿದ್ದರೂ ಜಮೀನನ್ನು ಮಾರಾಟ ಮಾಡಲಾಗಿದೆ ಎಂದು ಆರೋಪಿಸಿದ ಅವರು . ಜಮೀನು ಮಾರಾಟದ ಬಳಿಕ ದೇವಸ್ಥಾನದ ಪೂಜೆ, ಪುನಸ್ಕಾರ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಅಡಚಣೆ ಉಂಟಾಗಿದ್ದು, ಹಲವು ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ. ಈ ಹಿನ್ನೆಲೆಯಲ್ಲಿ ಎತ್ತಿನಬೂದಿಹಾಳು ಗ್ರಾಮದ ನಿವಾಸಿಗಳು ಹಾಗೂ ಭಕ್ತರು ತಿಪ್ಪಮ್ಮ ಮತ್ತು 1ನೇ ಪ್ರತಿವಾದಿ ವಿರುದ್ಧ ಓ.ಎಸ್.ನಂ.348/2021ರಲ್ಲಿ ದಾವೆ ಹೂಡಿದ್ದಾರೆ ಎಂದು ಹೇಳಿದರು.

ಮತ್ತು ಈ ವಿಚಾರವಾಗಿ ಗ್ರಾಮಾಂತರ ಪೊಲೀಸ್ ಠಾಣೆಗೆ ಹಲವು ಬಾರಿ ದೂರು ನೀಡಲಾಗಿದ್ದು, ಪೊಲೀಸರು ಜಮೀನನ್ನು ಪರಿಶೀಲಿಸಿ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನಿನಲ್ಲಿ ಉಳುಮೆ ಮಾಡದಂತೆ ಜಮೀನು ಖರೀದಿದಾರರಿಗೆ ಹಾಗೂ ಅವರ ಸಂಗಡಿಗರಿಗೆ ಸೂಚಿಸಿದ್ದರು. 2025ರಲ್ಲಿ ಜಮೀನು ಖರೀದಿಸಿದವರು ಹಾಗೂ ಅವರ ಸಂಗಡಿಗರು ಪೊಲೀಸ್ ಠಾಣೆಗೆ ಭೇಟಿ ನೀಡಿ, ದೇವಸ್ಥಾನದ ಜಮೀನಿನಿಂದ ಬರುವ ಆದಾಯವನ್ನು ದೇವಸ್ಥಾನದ ಬ್ಯಾಂಕ್ ಖಾತೆಗೆ ಜಮಾ ಮಾಡುವುದಾಗಿ ಭರವಸೆ ನೀಡಿದ್ದರು. ಆದರೆ ಇಲ್ಲಿಯವರೆಗೂ ದೇವಸ್ಥಾನದ ನಿರ್ವಹಣೆಗಾಗಿ ಯಾವುದೇ ಹಣವನ್ನು ಖಾತೆಗೆ ಜಮಾ ಮಾಡಿಲ್ಲ

ದೇವಸ್ಥಾನದ ನಿರ್ವಹಣೆಗಾಗಿ ನೋಂದಾಯಿತ ಟ್ರಸ್ಟ್ ಕೂಡ ರಚಿಸಲಾಗಿದೆ ಎಂದು ರಾಮಣ್ಣ ಅವರು ತಿಳಿಸಿದರು. ಜಮೀನಿನ ಯಾವುದೇ ದಾಖಲೆಗಳು ಖರೀದಿದಾರರ ಹೆಸರಿನಲ್ಲಿ ಇಲ್ಲ ಮತ್ತು ಪಹಣಿ ಪತ್ರಿಕೆಯು ಸಹ ಕಲ್ಲೇಶ್ವರ ದೇವಸ್ಥಾನ ಎಂದು ಇರುತ್ತದೆ ಕಳೆದ ಹಲವು ದಶಕಗಳಿಂದ ಈ ಜಮೀನು ಕಲ್ಲೇಶ್ವರ ದೇವಸ್ಥಾನಕ್ಕೆ ಒಳಪಟ್ಟಿರುತ್ತದೆ ಪ್ರಸ್ತುತ ಜಮೀನು ವಿವಾದಕ್ಕೆ ಒಳಪಟ್ಟಿರುವ ಹಿನ್ನೆಲೆಯಲ್ಲಿ, ಕಲಂ 145 ಸಿಆರ್‌ಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ವಿವಾದಿತ ಜಮೀನಿನಲ್ಲಿ ಜಮೀನು ಖರೀದಿದಾರರು ಹಾಗೂ ಅವರ ಸಂಬಂಧಪಟ್ಟವರು ಉಳುಮೆ ಅಥವಾ ಯಾವುದೇ ಚಟುವಟಿಕೆ ನಡೆಸದಂತೆ ತಡೆಯಬೇಕು. ಅಗತ್ಯವಿದ್ದಲ್ಲಿ ಜಮೀನನ್ನು ಪೊಲೀಸ್ ವಶಕ್ಕೆ ಪಡೆದು ಕಾನೂನು ಸುವ್ಯವಸ್ಥೆ ಕಾಪಾಡಬೇಕು ಎಂದು ಹಿರಿಯ ವಕೀಲರಾದ ರಾಮಣ್ಣ ಅವರು ಆಗ್ರಹಿಸಿದರು.ದೇವಸ್ಥಾನಕ್ಕೆ ಸಂಬಂಧಪಟ್ಟ ಆಸ್ತಿಗಳು ದೇವಸ್ಥಾನದ ಆಸ್ತಿಗಳಾಗಿದ್ದು, ಅವುಗಳನ್ನು ಕಂದಾಯ ದಾಖಲೆಗಳಲ್ಲಿ ದೇವಸ್ಥಾನದ ಹೆಸರು ಹಾಗೂ ಸಂಬಂಧಪಟ್ಟ ಟ್ರಸ್ಟ್‌ನ ವಿವರಗಳೊಂದಿಗೆ ನಮೂದಿಸುವ ಕುರಿತು ಸರ್ವೋಚ್ಚ ನ್ಯಾಯಾಲಯದ ಆದೇಶವಿದೆ. ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.ಹೀಗಾಗಿ ಅಧಿಕಾರಿಗಳು ಕೂಡಲೇ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕಲಂ 145 ಸಿಆರ್‌ಪಿಸಿ ಅಡಿಯಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನಿನಿಂದ ಬರುವ ಆದಾಯವನ್ನು ದೇವಸ್ಥಾನದ ಖಾತೆಗೆ ಜಮಾ ಮಾಡುವಂತೆ 1ನೇ ಪ್ರತಿವಾದಿಗೆ ನಿರ್ದೇಶನ ನೀಡಬೇಕು ಎಂದು ರಾಮಣ್ಣ ಅವರು ಒತ್ತಾಯಿಸಿದರು.ಈ ಸಂದರ್ಭದಲ್ಲಿ ಕಲ್ಲೇಶ್ವರ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಕಾವಲಿ ಮಾರಣ್ಣ ಕಾರ್ಯದರ್ಶಿ ಕಟ್ಟೆ ಬಸಪ್ಪ ಸದಸ್ಯರಾದ , ಶ್ರೀದೇವಿ ಪತ್ರಿಕಾಗೋಷ್ಟಿಯಲ್ಲಿ ಉಪಸ್ಥಿತರಿದ್ದರು.

# ಬೇರೆಯವರ ನಿವೇಶನ ನನಗೆ ಮಾರಾಟ ಮಾಡಿ 55 ಲಕ್ಷ ವಂಚನೆ ; ನ್ಯಾಯ ಕೊಡಿಸಲು ಮೊಹಮ್ಮದ್ ಮುಕ್ತಿಯಾರ್ ಮನವಿ

ಬಳ್ಳಾರಿ : ಬೇರೆಯವರ ನಿವೇಶನವನ್ನು ತಮ್ಮದೇ ಆಸ್ತಿ ಎಂದು ನಂಬಿಸಿ ನನಗೆ ಮಾರಾಟ ಮಾಡಿ ಸುಮಾರು 55 ಲಕ್ಷ ರೂಪಾಯಿಗಳನ್ನು ರಾಜಾಭಕ್ಷಿ ಎನ್ನುವವರು ನನಗೆ ವಂಚನೆ ಮಾಡಿದ್ದಾರೆ, ಅವರಿಂದ ನನಗೆ ನಿವೇಶನವಾದರೂ ಕೊಡಿಸಿ ಅಥವಾ 55 ಲಕ್ಷ ಹಣವನ್ನು ಆದರೂ ಕೊಡಿಸಿ ಎಂದು ಮೊಹಮ್ಮದ್ ಮುಕ್ತಿಯರ್ ಜಿಲ್ಲಾ ಪೊಲೀಸ್ ಇಲಾಖೆಗೆ ಮನವಿ ಮಾಡಿದರು . ಈ ವಿಷಯದ ಕುರಿತು ಇಂದು ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಕ್ತಿಯರ್,

ವೆಂಕಟೇಶ್ವರ ನಗರ 3ನೇ ಕ್ರಾಸ್‌ನಲ್ಲಿರುವ 60*40 ಅಳತೆಯ ನಿವೇಶನವನ್ನು ರಾಜ್‌ಬಕ್ಷಿ ಎಂಬ ವ್ಯಕ್ತಿ 2020ರಲ್ಲಿ 55 ಲಕ್ಷಕ್ಕೆ ನನಗೆ ಮಾರಾಟ ಮಾಡಿದ್ದರು. ಈ ನಿವೇಶನದ ಕುರಿತು 2021–22ರಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ ಹಲವು ಅನುಮಾನಾಸ್ಪದ ಅಂಶಗಳು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ನಮ್ಮ ವಕೀಲರ ಮೂಲಕ ಪರಿಶೀಲಿಸಿದಾಗ ಸದರಿ ನಿವೇಶನವು ಈ ಹಿಂದೆ ಸುಧಾರಾಣಿ ಅವರ ಹೆಸರಿನಲ್ಲಿ ಇತ್ತು. ರಾಜಭಕ್ಷಿ 2019ರಲ್ಲಿ ಸುಧಾರಾಣಿ ಅವರಿಂದ 18 ಲಕ್ಷಕ್ಕೆ ಈ ನಿವೇಶನವನ್ನು ಖರೀದಿಸಿರುವುದಾಗಿ ಹೇಳಿಕೊಂಡು, ಬಳಿಕ ಅದನ್ನೇ ನನಗೆ 55 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ ಆದರೆ ನಿವೇಶನದ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಗೊಂದಲ ಹಾಗೂ ವಿವಾದಗಳು ಇರುವುದರಿಂದ ತಾವು ವಂಚನೆಗೆ ಒಳಗಾಗಿರುವುದು ತಿಳಿದುಬಂದಿದೆ ನಮ್ಮ ವಕೀಲರ ಸೂಚನೆ ಮೇರೆಗೆ ನಾನು ಈ ವಿಷಯದ ಕುರಿತು ಪೊಲೀಸರಿಗೆ ದೂರನ್ನು ಸಲ್ಲಿಸಿದ್ದೇನೆ ಮತ್ತು ನ್ಯಾಯಾಲಯದಲ್ಲಿ




ದಾವೆಯನ್ನು ಸಹ ಹೂಡಿದ್ದೇನೆ

ಇದೆಲ್ಲದರ ಮಧ್ಯೆ ನಿವೇಶನದ ಮೂಲ ಮಾಲೀಕತ್ವಕ್ಕೆ ಸಂಬಂಧಿಸಿದ ಪಟ್ಟದಾರ ಲಕ್ಷ್ಮೀನಾರಾಯಣ ಅವರು ಹೈಕೋರ್ಟ್‌ನಲ್ಲಿ ಪ್ರಕರಣ ಗೆದ್ದು, ನಿವೇಶನದಲ್ಲಿ ತಮ್ಮ ಹಕ್ಕು ಸೂಚಿಸುವ ಫಲಕವನ್ನೂ ಅಳವಡಿಸಿದ್ದಾರೆ. ಇದನ್ನು ಗಮನಿಸಿದ ಬಳಿಕ ರಾಜಭಕ್ಷಿ ಅವರನ್ನು ಸಂಪರ್ಕಿಸಿ ಸ್ಪಷ್ಟನೆ ಕೇಳಿದರೂ ಯಾವುದೇ ಸಮರ್ಪಕ ಉತ್ತರ ನೀಡುತ್ತಿಲ್ಲ ಎಂದು ಮುಕ್ತಯರ್ ಆರೋಪಿಸಿದರು. ವಿವಾದದಲ್ಲಿರುವ ನಿವೇಶನವನ್ನು ಸುಳ್ಳು ದಾಖಲೆಗಳ ಮೂಲಕ ನಂಬಿಸಿ ಮಾರಾಟ ಮಾಡಿ ನಮಗೆ ಆರ್ಥಿಕವಾಗಿ ವಂಚನೆ ಮಾಡಲಾಗಿದೆ. ಇಂತಹ ಪ್ರಕರಣಗಳಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ, ಕಂದಾಯ ಇಲಾಖೆ ನ್ಯಾಯಾಲಯದಲ್ಲಿ ಪ್ರಕರಣಗಳಿದ್ದ ಜಮೀನು ಅಥವಾ ನಿವೇಶನಗಳ ದಾಖಲೆಯಲ್ಲಿ ನ್ಯಾಯಾಲಯದಲ್ಲಿ ಪ್ರಕರಣವಿದೆ ಎಂದು ಎಲ್ಲಾ ದಾಖಲಾತಿಗಳಲ್ಲಿ ನಮೂದಿಸಬೇಕು ಇದರಿಂದ ಸಾರ್ವಜನಿಕರು ಮೋಸ ವಂಚನೆಗೆ ಒಳಗಾಗುವುದು ತಪ್ಪುತ್ತದೆ ಎಂದು ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳಲ್ಲಿ ಮನವಿ ಮಾಡಿದರು .ಬಳ್ಳಾರಿ ನಗರದಲ್ಲಿ ಇಂತಹ ಹಲವು ರೀತಿಯ ನಿವೇಶನ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅಥವಾ ಬೇರೆಯವರ ಹೆಸರಿನಲ್ಲಿರುವ ಆಸ್ತಿಯನ್ನು ತಮ್ಮದೆಂದು ಬಿಂಬಿಸಿ ಮಾರಾಟ ಮಾಡುವವರ ವಿರುದ್ಧ ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು ನಿವೇಶನ ಖರೀದಿಸುವ ಮುನ್ನ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಅವರು ಮನವಿ ಮಾಡಿದರು.ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್, ಮೊಹಮ್ಮದ್ ಫಯಾಜ್ ಮತ್ತು ಅವರ ಕಾನೂನು ಸಲಹೆಗಾರರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಹಳೇ ಮೀಸಲು ಪದ್ಧತಿ ಮುಂದುವರಿಸಲಿ ಹರಪನಹಳ್ಳಿಯಲ್ಲಿ ಕೊಲಂಬೋ ಸಮುದಾಯದಿಂದ ಪ್ರತಿಭಟನೆ



ಹರಪನಹಳ್ಳಿ; ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಸಮುದಾಯಗಳನ್ನು ಗುಂಪುಗಳಾಗಿ ವರ್ಗೀಕರಿಸಿ ಅವೈಜ್ಞಾನಿಕ ಒಳಮೀಸಲಾತಿ ಜಾರಿಗೊಳಿಸಿದೆ ಎಂದು ಆರೋಪಿಸಿ ಕೊಲಂಬೋ ಸಮುದಾಯಗಳಿಂದ ಶನಿವಾರ ಪ್ರತಿಭಟನೆ ನಡೆಯಿತು.

ರಾಜ್ಯ ಸರ್ಕಾರ ಕೊಲಂಬೋ ಸಮುದಾಯಗಳ ಜತೆ 59 ಅಲೆಮಾರಿ ಸಮುದಾಯಗಳನ್ನು ಸೇರ್ಪಡೆ ಮಾಡಿ ಇರುವ ಮೀಸಲಾತಿಯಲ್ಲಿ ಪಾಲು ನೀಡುವ ಮೂಲಕ ಸಂವಿಧಾನದ ಆಶಯಕ್ಕೆ ಪೆಟ್ಟು ನೀಡಿದೆ. ಪ್ರಸ್ತುತ ಹೊರಡಿಸಿರುವ ಹಲವು ಹುದ್ದೆಗಳ ನೇಮಕಾತಿ ಅಧಿಸೂಚನೆಗಳಲ್ಲಿ ರೋಸ್ಟರ್ ಬಿಂದುವಿನ ಹುದ್ದೆಗಳಲ್ಲಿಯೂ ಅಲೆಮಾರಿ ಸಮುದಾಯಕ್ಕೂ ಆದ್ಯತೆ ನೀಡಿದೆ. ಇದರಿಂದ ಕೊಲಂಬೋ ಸಮುದಾಯದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದ್ದು, ಒಂದು ಹುದ್ದೆಯೂ ಸಿಗುವುದಿಲ್ಲ ಎಂದು ದೂರಿದರು.

ಅವೈಜ್ಞಾನಿಕ ಒಳಮೀಸಲಾತಿ ಹಂಚಿಕೆ ಹಾಗೂ ರೋಸ್ಟರ್ ಬಿಂದು ಆದೇಶ ರದ್ದುಗೊಳಿಸಿ ಹಳೇ ಮೀಸಲಾತಿ ಮುಂದುವರಿಸಬೇಕು. ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳ ವಿದ್ಯಾರ್ಥಿಗಳಿಗೆ ಉದ್ಯೋಗದಲ್ಲಿ ಸಮಾನ ಅವಕಾಶ ಕಲ್ಪಿಸಬೇಕು. ಅಲೆಮಾರಿ ಸಮುದಾಯದ 59 ಉಪಜಾತಿಗಳನ್ನು ಸಿ ಗುಂಪಿನಿಂದ ಪ್ರತ್ಯೇಕಗೊಳಿಸಿ ಶೇ.1 ಮೀಸಲು ನೀಡಬೇಕು ಎಂದು ಒತ್ತಾಯಿಸಿದರು.

# ಪಿಕಾರ್ಡ್ ಬ್ಯಾಂಕ್ ಮಹಾಸಭೆ ; ಸಕಾಲದಲ್ಲಿ ಸಾಲ ಮರುಪಾವತಿಸಿ ಸರ್ಕಾರಿ ಸೌಲಭ್ಯ ಪಡೆದುಕೊಳ್ಳಿ : ವಿ ದೊಡ್ಡ ದೇಶವ ರೆಡ್ಡಿ




ಬಳ್ಳಾರಿ : ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಬಳ್ಳಾರಿ ಇದರ 2025–26ನೇ ಸಾಲಿನ ಮಹಾಜನ ಸಭೆಯು ನಗರದ ಬ್ಯಾಂಕ್ ಕಚೇರಿಯಲ್ಲಿ ಶುಕ್ರವಾರ ಬೆಳಿಗ್ಗೆ ನಡೆಯಿತು. ಬ್ಯಾಂಕಿನ ಅಧ್ಯಕ್ಷ ವಿ. ದೊಡ್ಡಕೇಶವರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ 2025–26ನೇ ಸಾಲಿನ ಆಡಳಿತ ವರದಿಯನ್ನು ಮಂಡಿಸಲಾಯಿತು. ಕಾರ್ಯಸೂಚಿಯಲ್ಲಿದ್ದ 15 ವಿಷಯಗಳನ್ನು ಚರ್ಚಿಸಿ ಸರ್ವ ಸದಸ್ಯರ ಅನುಮೋದನೆ ಪಡೆಯಲಾಯಿತು. ತಾಲೂಕಿನ ರೈತರನ್ನು ಉದ್ದೇಶಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷ ವಿ. ದೊಡ್ಡಕೇಶವರೆಡ್ಡಿ ಅವರು, ಬ್ಯಾಂಕಿನ ಸಾಲವನ್ನು ಸಕಾಲದಲ್ಲಿ ಮರುಪಾವತಿಸಿದ ಸದಸ್ಯರನ್ನು ಅಭಿನಂದಿಸಿದರು. ಅಲ್ಲದೆ, ಮಹಾಜನ ಸಭೆಯನ್ನು ಯಶಸ್ವಿಗೊಳಿಸಿದ ಎಲ್ಲ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ನಡೆದ ಸಭೆಯ ನಿರೂಪಣೆಯನ್ನು ಬ್ಯಾಂಕಿನ ವ್ಯವಸ್ಥಾಪಕ ಎ. ದೀಪಕ್ ಕುಮಾರ್ ಅವರು ನಿರ್ವಹಿಸಿದರು. ನಿರ್ದೇಶಕ ದಮ್ಮೂರು ಷಣ್ಮುಖ ಅವರು ಸ್ವಾಗತಿಸಿದರು.

ಸಭೆಯಲ್ಲಿ ಉಪಾಧ್ಯಕ್ಷ ದೇವಣ್ಣ ಗೊಲ್ಲರ ನಾಗೇನಹಳ್ಳಿ, ಆಡಳಿತ ಮಂಡಳಿ ನಿರ್ದೇಶಕರಾದ ಬಿ. ಚಂದ್ರಶೇಖರ (ಕಮ್ಮರಬೇಡು), ಬಿ. ಜಗದೀಶ ಗೌಡ (ಬಾಣಾಪುರ), ಎಲ್. ಗೋವಿಂದ ನಾಯ್ಕ (ಬೆಳಗಲ್ಲು), ದಮ್ಮೂರು ಷಣ್ಮುಖ (ಕೊಳಗಲ್ಲು), ಆರ್. ಲಕ್ಷ್ಮೀನಾರಾಯಣ (ಕಾಕರ್ಲ ತೋಟ), ಕರಡಿ ನಾಗರಾಜ (ಚಾಗನೂರು), ತುಳಸಪ್ಪ (ಯರಗುಡಿ), ಲತಾ ಎ. (ಬಳ್ಳಾರಿ), ವಿ. ಗಂಗಮ್ಮ (ಕೊರ್ಲಗುಂದಿ), ಕೆ. ವರಬಸಪ್ಪ (ಶ್ರೀಧರಗಡ್ಡೆ), ಕೆ. ರಾಘವೇಂದ್ರ (ಬಳ್ಳಾರಿ), ಕೆ. ಪಾಲಾಕ್ಷಿ ರೆಡ್ಡಿ (ಬಳ್ಳಾರಿ) ಹಾಗೂ ಕಸ್ಕಾರ್ಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಸಿ. ಮಂಜುನಾಥ ಉಪಸ್ಥಿತರಿದ್ದರು.

# ಭಕ್ತಿ ಶ್ರದ್ಧೆಯಿಂದ ಶ್ರೀ ರಾಘವೇಂದ್ರಸ್ವಾಮಿ ಗುರುಸಾರ್ವಭೌಮರ 355ನೇ ಆರಾಧನೆ ಆರಂಭ



ಬಳ್ಳಾರಿ : ಶ್ರೀ ರಾಘವೇಂದ್ರತರ್ಥ ಗುರುಸರ್ವಭೌಮರ 355ನೇ ಆರಾಧನಾ ಮಹೋತ್ಸವವನ್ನು ಜಗದ್ಗುರು ಶ್ರೀ ಮನ್ಮಧ್ವಾಚರ್ಯರ ಮೂಲ ಮಹಾ ಸಂಸ್ಥಾನಾಧೀಶ್ವರರಾದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ವೇದಾಂತ ದಿಗ್ವಿಜಯ ವಿದ್ಯಾ ಸಿಂಹಾಸನಾಧೀಶ್ವರರಾದ ಪ್ರಾತಃ ಸ್ಮರಣೀಯ ಶ್ರೀ ಶ್ರೀ ಸುಯತೀಂದ್ರ ತರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರು, ಪ್ರಸ್ತುತ ಮಂತ್ರಾಲಯ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ 1008 ಶ್ರೀ ಶ್ರೀ ಡಾ. ಸುಬುಧೇಂದ್ರ ತರ್ಥ ಶ್ರೀಪಾದಂಗಳವರ ಆಜ್ಞಾನುಸಾರ ಇಂದು ಶ್ರೀ ಪರಾಭವನಾಮ ಸಂವತ್ಸರದ ಶ್ರಾವಣ ಬಹುಳ ಪ್ರತಿಪದ ಪ್ರಥಮ ದಿನದ ಶ್ರೀ ರಾಘವೇಂದ್ರ ಸಾರ್ವಭೌಮರ ಆರಾಧನೆಯು ಭಕ್ತಿ ಮತ್ತು ಶ್ರದ್ಧೆಯಿಂದ ಆರಂಭಿಸಲಾಯಿತು. ನಗರದ ಶ್ರೀ ಸತ್ಯನಾರಾಯಣ ಪೇಟೆ–ಯ ರಾಯರ ಮಠ ಪ್ರಕಟಣೆ ನೀಡಿದ್ದು, ಆಗಸ್ಟ್ 29, 30 ಮತ್ತು 31ರ ಶನಿವಾರ, ಭಾನುವಾರ, ಸೋಮವಾರದಂದು ಶ್ರೀ ಹರಿವಾಯು ಗುರುಗಳ ಪ್ರೇರಣಾನುಸಾರ ಶ್ರೀ ಸತ್ಯನಾರಾಯಣ ಪೇಟೆ–ಯ 1ನೇ ಅಡ್ಡರಸ್ತೆಯಲ್ಲಿರುವ ಜಗದ್ಗುರು ಶ್ರೀಮನ್ಮಧ್ವಾಚರ್ಯ ಮೂಲಮಹಾಸಂಸ್ಥಾನ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮೂಲ ಮೃತ್ತಿಕ ಬೃಂದಾವನ ಸನ್ನಿಧಾನದಲ್ಲಿ ನೆರವೇರಿಸಲಾಯಿತು . ಆ.29ರ ಶನಿವಾರ ಪರ್ವಾರಾಧನೆ, ಅತ್ಯಂತ ವೈಭವ ಹಾಗೂ ಶ್ರದ್ಧಾಭಕ್ತಿಯಿಂದ ಭಕ್ತರು ಪಾಲ್ಗೊಂಡಿದ್ದರು ಇಂದಿನ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 355ನೇ ಆರಾಧನಾ ಮಹೋತ್ಸವ ಶನಿವಾರ ಪೂರ್ವಾರಾಧನೆ ವಿಜೃಂಭಣೆಯಿಂದ ನಡೆಯಿತು,. ಈ ದಿನದ ಕಾರ್ಯಕ್ರಮದಲ್ಲಿ ನಗರ ಶಾಶಕ


ಜಿ ಸೋಮಶೇಖರ್ ರೆಡ್ಡಿ, ಮುಖಂಡರಾದ ಕೆ ಎಸ್ ದಿವಾಕರ್. ಕೆ .ಎಸ್. ಅಶೋಕ್ ಕುಮಾರ್,, ನೇಮಕಲ್ ರಾವ್ ಮತ್ತು ರಾಯರ ಸದ್ಭಕ್ತರು ಶ್ರೀ ಗುರುರಾಯರ ಸೇವೆಮಾಡಿ ತರ್ಥ–ಪ್ರಸಾದ, ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿ ಶ್ರೀ ರಾಘವೇಂದ್ರ ತರ್ಥ ಗುರುಸರ್ವಭೌಮರ ಸಂಪರ್ಣ ಅನುಗ್ರಹಕ್ಕೆ ಪಾತ್ರರಾದರು.

# ಗೃಹಲಕ್ಷ್ಮೀ 3ನೇ ವರ್ಷಾಚರಣೆ: ಪಿಂಕ್ ಲೈಟ್‌ನಲ್ಲಿ ಮಿಂಚಿದ ಹಂಪಿ ಕಲ್ಲಿನ ತೇರು

ಹೊಸಪೇಟೆ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮೀ ಯೋಜನೆಗೆ ಮೂರು ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ, ವಿಶ್ವವಿಖ್ಯಾತ ಹಂಪಿಯ ಐತಿಹಾಸಿಕ ಕಲ್ಲಿನ ತೇರಿಗೆ ಪಿಂಕ್ ಲೈಟ್ ದೀಪಾಲಂಕಾರ ಮಾಡಲಾಗಿದೆ.

ಮಹಿಳೆಯರ ಆರ್ಥಿಕ ಸಬಲೀಕರಣದ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗೃಹಲಕ್ಷ್ಮೀ ಯೋಜನೆಗೆ ಮೂರು ವರ್ಷಗಳು ಪೂರ್ಣಗೊಂಡಿವೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಐತಿಹಾಸಿಕ ಹಾಗೂ ಪ್ರಮುಖ ಸ್ಮಾರಕಗಳಿಗೆ ಪಿಂಕ್ ಲೈಟ್ ಅಲಂಕಾರ ಮಾಡುವಂತೆ ಸರ್ಕಾರ ಸೂಚಿಸಿದೆ.

ಸರ್ಕಾರದ ಆದೇಶದಂತೆ ವಿಜಯನಗರ ಜಿಲ್ಲೆಯ ವಿಶ್ವವಿಖ್ಯಾತ ಹಂಪಿಯ ಪ್ರಮುಖ ಸ್ಮಾರಕವಾದ



ಕಲ್ಲಿನ ತೇರಿಗೆ ಗುಲಾಬಿ ಬಣ್ಣದ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ.

ರಾತ್ರಿ ವೇಳೆ ಪಿಂಕ್ ಲೈಟ್‌ಗಳ ಬೆಳಕಿನಲ್ಲಿ ಕಲ್ಲಿನ ತೇರು ಕಂಗೊಳಿಸಿದ್ದು, ಹಂಪಿಗೆ ಆಗಮಿಸಿದ್ದ ಪ್ರವಾಸಿಗರ ಗಮನ ಸೆಳೆಯಿತು. ಬಣ್ಣಬಣ್ಣದ ಬೆಳಕಿನಲ್ಲಿ ಕಂಗೊಳಿಸಿದ ಐತಿಹಾಸಿಕ ಸ್ಮಾರಕವನ್ನು ಪ್ರವಾಸಿಗರು ಕಣ್ತುಂಬಿಕೊಂಡು ಸಂಭ್ರಮಿಸಿದರು.

ವಿಶ್ವ ಪಾರಂಪರಿಕ ತಾಣವಾಗಿರುವ ಹಂಪಿಯ ಕಲ್ಲಿನ ತೇರು, ಗೃಹಲಕ್ಷ್ಮೀ ಯೋಜನೆಯ ಮೂರು ವರ್ಷಗಳ ಸಂಭ್ರಮಕ್ಕೆ ವಿಶೇಷ ರೀತಿಯಲ್ಲಿ ಸಾಕ್ಷಿಯಾಯಿತು.

EDITOR : S VENKATESULU, D.NO.: 4/38, MAIN ROAD, SETTUR, ANANTHAPUR, ANDHRA PRADESH - 515767, PUBLISHER : S VENKATESULU 237, Ward No 22 Talur Road, Lingamma Compund, Bellary, Bellary, Karnataka - 583101. KARNATAKA - 583113.
OWNER : S VENKATESULU D.NO.: 4/38, MAIN ROAD, SETTUR, ANANTHAPUR, ANDHRA PRADESH - 515767. PRINTER: VADDARA DODDA VEERESH, 1ST WARD, NAYAKARA ONI, AGASARA ONI, AT/POST-SOMALAPURA, BELLARY, KARNATAKA - 583101.